ಗೊರೂರು ರಾಮಸ್ವಾಮಿ ಅಯ್ಯಂಗಾರ್

ವ್ಯಕ್ತಿ ಪರಿಚಯ



ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

ಡಾ. ಸಿ. ಜಿ. ವೆಂಕಟಯ್ಯ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೩

ಗೊರೂರು ರಾಮಸ್ವಾಮಿ ಅಯ್ಯಂಗಾರ್

ವ್ಯಕ್ತಿ ಪರಿಚಯ

ಡಾ. ಸಿ.ಜಿ. ವೆಂಕಟಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಬಡಾವಣೆ
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

GORURU RAMASWAMY IYENGAR
A pen portrait - by DR. C.G. VENKATAIAH.
Published by : KARNATAKA JANAPADA PARISHATH.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalore - 560 054.
Pages : 32 Price : Rs.10 2008.

ಪ್ರಥಮ ಮುದ್ರಣ : ೨೦೦೮

ಪ್ರತಿಗಳು : ೨೦೦೦

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿ)

ಮುದ್ರಕರು : ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಸುಪ್ರಸಿದ್ಧ ವಿದ್ವಾಂಸರಾದ **ಡಾ. ಸಿ.ಜಿ. ವೆಂಕಟಯ್ಯ** ಅವರು **ಗೊರೂರು ರಾಮಸ್ವಾಮಿ ಅಯ್ಯಂಗಾರ್** ರವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೦೧-೦೧-೨೦೦೮

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಗೊರೂರು ಹಾಸನದಲ್ಲಿ ಹಾಗೂ ಹಾಸನ ತಾಲ್ಲೂಕಿನಲ್ಲಿರುವ ಒಂದು ಸಾಮಾನ್ಯ ಗ್ರಾಮ. ಆದರೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅದರಲ್ಲೂ ಹಾಸ್ಯ ಸಾಹಿತ್ಯದಲ್ಲಿ ಅದಕ್ಕೊಂದು ಪ್ರಮುಖ ಸ್ಥಾನವನ್ನು ದೊರಕಿಸಿಕೊಟ್ಟ ಕೀರ್ತಿ ಗೊರೂರರದ್ದು. ಇವರು ದಿನಾಂಕ ೦೪-೦೭-೧೯೦೪ ರಲ್ಲಿ ಗೊರೂರು ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಶ್ರೀನಿವಾಸ ಅಯ್ಯಂಗಾರ್ ಮತ್ತು ತಾಯಿ ಲಕ್ಷ್ಮಮ್ಮ. ಗೊರೂರರ ತಂದೆ ವೈದಿಕರು. ಸಂಸ್ಕೃತ ವಿದ್ವಾಂಸರು. ಗೊರೂರಿನ ಸುತ್ತಮುತ್ತ ಅನೇಕ ಹಳ್ಳಿಗಳಿಗೆ ಅವರೇ ಪುರೋಹಿತರಾಗಿದ್ದರು. ತುಂಬು ಸಂಸಾರಿಯಾದ ಅವರಿಗೆ ಹನ್ನೆರಡು ಜನ ಮಕ್ಕಳು. ಗೊರೂರು ಗಂಡುಮಕ್ಕಳಲ್ಲಿ ಎರಡನೆಯವರು. ವೈದಿಕ ನಿಷ್ಠರಾದ ಗೊರೂರರ ತಂದೆಯವರು ಇಂಗ್ಲಿಷ್ ಕಲಿಯುವುದು ತಪ್ಪು ಅಂತಲೇ ಹೇಳುತ್ತಿದ್ದರು. ಇಂಗ್ಲೀಷ್ ಭಾರತೀಯರ ಭಾಷೆಯಲ್ಲ. ಇಂಗ್ಲೀಷ್ ಕಲೀದೇ ಇರೋನೇ ನಿಜವಾದ ಭಾರತೀಯನಾಗುತ್ತಾನೆ; ಸರಿಯಾದ ಭಾರತೀಯನಾಗುತ್ತಾನೆ. ಸರಿಯಾದ ಭಾರತೀಯ ಸಂಸ್ಕೃತಿ ಇರಬೇಕಾದರೆ ಮ್ಲೇಚ್ಛ ಸಹವಾಸ ಇರಬಾರದು. ಇಂಗ್ಲಿಷ್ ಗ್ರಂಥ ಕೂಡಾ ಅನ್ಯರ ಸಹವಾಸವೇ ಎನ್ನುವುದು ಅವರ ಭಾವನೆಯಾಗಿತ್ತು. ನಿಯಮಬದ್ಧ ಜೀವನ ನಡೆಸುತ್ತಿದ್ದ ಗೊರೂರರ ತಂದೆಯವರು ಸಾಹಸಿ ಮತ್ತು ಸ್ವಾವಲಂಬಿಯಾಗಿದ್ದರು. ಇಂಥ ವಾತಾವರಣದಲ್ಲಿ ಗೊರೂರು ಬೆಳೆದವರು. ಗೊರೂರರ ಬಾಲ್ಯದಲ್ಲಿ ಶಿಸ್ತು ಹೆಚ್ಚಾಗಿತ್ತು. ಆದರೆ ಕ್ರೌರ್ಯವಿರಲಿಲ್ಲ. ಹಿಂದಿನ ಕಾಲದ ಪದ್ಧತಿಯಂತೆ ಇವರ ಮನೆಯು ಯಾವಾಗಲೂ ನೆಂಟರು-

ಇಷ್ಟರಿಂದ ತುಂಬಿರುತ್ತಿತ್ತು. ಹೀಗೆ ಸದಾಕಾಲವೂ ತುಂಬಿರುವ ಮನೆಯಲ್ಲಿ ಪ್ರತಿಯೊಬ್ಬರೂ ಅವರವರ ಪಾಲಿಗೆ ದೊರೆತ ಸುಖವನ್ನು ನೆಮ್ಮದಿಯನ್ನು ಅನುಭವಿಸಿಕೊಂಡು ಹೋಗುತ್ತಿದ್ದರು.

ಗೊರೂರರು ಇಂದಿನ ಸೀಮಿತ ಅರ್ಥದ ವಿದ್ಯಾವಂತರಲ್ಲ. ಶಾಲಾ ಕಾಲೇಜುಗಳಲ್ಲಿ ಓದಿ ಪರೀಕ್ಷೆಗಳನ್ನು ತೆಗೆದುಕೊಂಡು ಪದವೀಧರರಾದವರಲ್ಲ. ಅವರು ಮದ್ರಾಸ್ ವಿಶ್ವವಿದ್ಯಾನಿಲಯದ ಕನ್ನಡ ವಿದ್ವಾನ್ ಪರೀಕ್ಷೆಯೊಂದರಲ್ಲಿ ಮಾತ್ರ ತೇರ್ಗಡೆಯಾಗಿದ್ದರು.

ಸುಮಾರು ೧೯೩೦-೩೧ರ ಸಮಯ. ಆಗಷ್ಟೇ ಗೊರೂರರ 'ಹಳ್ಳಿಯ ಚಿತ್ರಗಳು' ಪ್ರಕಟವಾಗಿ ಹೊಸ ಬಗೆ ಕೃತಿ ಎಂದು ಹಲವರ ಮೆಚ್ಚುಗೆ ಗಳಿಸಿತ್ತು. ಅದನ್ನು ಓದಿದ್ದ ಶ್ರೀ ಎನ್.ಎಸ್. ಸುಬ್ಬರಾಯರು ಆ ವರ್ಷ ಗೊರೂರರನ್ನು ಎಸ್.ಎಸ್.ಎಲ್‌ಸಿ ಪರೀಕ್ಷೆಗೆ ಪರೀಕ್ಷಕರನ್ನಾಗಿ ನೇಮಿಸಿದರು. ಗೊರೂರರು ಯಾವ ಪರೀಕ್ಷೆಯನ್ನು ಮಾಡಿಲ್ಲವೆಂದು ತಿಳಿದಿದ್ದ ಮೇಲಿನ ಪರೀಕ್ಷಾಧಿಕಾರಿಗಳು ಹೊಟ್ಟೆಯುರಿದುಕೊಂಡು ಸುಬ್ಬರಾಯರಲ್ಲಿ ದೂರುಕೊಟ್ಟರು.

"ಅವರು ಯಾವ ಪರೀಕ್ಷೆ ಮಾಡದಿದ್ದರೇನಂತೆ, 'ಹಳ್ಳಿಯ ಚಿತ್ರಗಳು' ಪುಸ್ತಕ ಬರೆದಿಲ್ಲವೇ? ಸಾಕು" ಎಂದು ಸುಬ್ಬರಾಯರು ದೂರು ತಂದವರ ಬಾಯಿಮುಚ್ಚಿಸಿದರು. ಆಮೇಲೆ ಗೊರೂರರನ್ನು ಕರೆಸಿ ಕೇಳಿದರು.

"ಏನ್ರಿ ಬಿ.ಎ. ಮಾಡಿಲ್ಲವೆ?"

"ಇಲ್ಲ"

"ಇಂಟರ್ ಮೀಡಿಯಟ್ ಮಾಡಿಲ್ಲವೆ?"

"ಇಲ್ಲ"

"ಎಸ್.ಎಸ್.ಎಲ್‌ಸಿ. ಮಾಡಿಲ್ಲವೇ?"

"ಇಲ್ಲ ಸಾರ್ ನಾನು ಯಾವ ಪರೀಕ್ಷೆಯನ್ನು ಮಾಡಿಲ್ಲ." ಗೊರೂರರು ಸ್ಪಷ್ಟಪಡಿಸಿದರು. ಸುಬ್ಬರಾಯರು ಬೇಸರದ ದನಿಯಲ್ಲಿ ಹೇಳಿದರು: "ನಿಮ್ಮಂಥವರನ್ನು ಕಟ್ಟಿಕೊಂಡು ಏನು ಮಾಡುವುದು? ಹೋಗಿ ಯಾವುದಾದರೂ ಪರೀಕ್ಷೆಗೆ ಕಟ್ಟಿ ಪಾಸುಮಾಡಿ". "ಆಗಲಿ" ಎಂದು ಗೊರೂರರು ಹೊರಟರು. ಈಗ ತಮಗಾಗಿಯಲ್ಲ ಸುಬ್ಬರಾಯರಿಗಾಗಿ ಅವರೊಂದು ಪರೀಕ್ಷೆಗೆ ಕಟ್ಟಬೇಕಾಯಿತು. ಮದ್ರಾಸ್ ವಿಶ್ವವಿದ್ಯಾನಿಲಯದ ವಿದ್ವಾನ್ ಪರೀಕ್ಷೆಗೆ ಕಟ್ಟಿದರು. ಸ್ವಾರಸ್ಯವೆಂದರೆ ಅವರು ತಮ್ಮದೇ ಪುಸ್ತಕ "ನಮ್ಮ ಊರಿನ ರಸಿಕರು" ಅನ್ನು ಪಠ್ಯವಾಗಿ ಓದಬೇಕಾಗಿ ಬಂತು. ಪರೀಕ್ಷೆ ಮುಗಿಯಿತು. ತೇರ್ಗಡೆಯಾಯಿತು. ಪರೀಕ್ಷಕರಾಗಿದ್ದ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಹೇಳಿದರಂತೆ:

"ನಿಮ್ಮ ಪುಸ್ತಕದ ಮೇಲೆ ನೀವು ಬರೆದ ಉತ್ತರಗಳಿಗೆ ಇನ್ನೂ ಕಡಿಮೆ ಅಂಕಗಳು ಬರಬೇಕಾಗಿತ್ತು".

ಇದು ಗೊರೂರರು ಕನ್ನಡ ವಿದ್ವಾಂಸ/ವಿದ್ವಾನರಾದ ಕಥೆ. ಆದರೆ ಈ ಪರೀಕ್ಷೆಯಿಂದ ಅವರಿಗೆ ಲಾಭವೇನೂ ಆಗಿಲ್ಲ. ಅವರಿಗೆ ಆದ ಲಾಭವೆಲ್ಲಾ ಬದುಕನ್ನು ಓದಿದ್ದರಿಂದ ಲಭಿಸಿದ್ದು. ಕನ್ನಡ ಸಾಹಿತ್ಯದಲ್ಲಿ ಗೊರೂರರು ಗ್ರಾಮೀಣ ಜೀವನದ ಒಳಬೇರುಗಳನ್ನು ಹಾಸ್ಯ ಮುಖದಿಂದ ಪರಿಚಯಿಸುವ ಹೊಣೆಹೊತ್ತದ್ದು ಬಲು ಮುಖ್ಯ. ಹೊಸಗನ್ನಡದಲ್ಲಿ ಹಾಸ್ಯದ ನೆಲೆಯೇ ಕಾಣಬರದಿದ್ದ ಸಂದರ್ಭದಲ್ಲಿ ಗೊರೂರರು ಪ್ರಪ್ರಥಮ ದೊಡ್ಡ ಪ್ರಮಾಣದ ಹಾಸ್ಯ ಬರಹಗಾರರಾಗಿ ಮಿಂಚಿದರೆಂಬುದು

ಐತಿಹಾಸಿಕ ಸತ್ಯ. ಮುದ್ದಣ್ಣ ಹಾಸ್ಯಕ್ಕೆ ಒಂದು ಹೊಸ ದಿಕ್ಕು ತೋರಿಸಿದ್ದು, 'ನಗೆಗಡಲು' ತುಂಬ ಜನಪ್ರಿಯವಾಯಿತಾದರೂ ಅದು ಸಮಕಾಲೀನ ಜೀವನ ಸಂದರ್ಭಗಳ ಗೊಬ್ಬರದಿಂದ ಪುಷ್ಟವಾಗಿ ಬದುಕಿನಾಚೆಗೆ ನಿಂತಿತು. ಗೊರೂರರು ಮಾತ್ರ ತಮ್ಮ ಸುತ್ತಮುತ್ತಣ ಬದುಕಿನ ನಡುವೆಯೇ ಹಾಸ್ಯವನ್ನು ಸೃಷ್ಟಿಸುವ ಒಂದು ಆರೋಗ್ಯಕರ ಮೆಲ್ಪಂಕ್ತಿಯನ್ನು ಹಾಕಿಕೊಟ್ಟರು. 'ಗರುಡ ಗಂಬದ ದಾಸಯ್ಯ' ಕೃತಿಯ ಮುನ್ನುಡಿಯಲ್ಲಿ ಬೇಂದ್ರೆಯವರು "ಗೊರೂರವರ ಕಲೆಯು ಎಲ್ಲಿಂದಲೋ ರಫ್ತಾಗಿ ಬಂದ ಸೀಮೆ ಸರಕಲ್ಲ. ಅದು ಜಾನಪದ ಜೀವನದಲ್ಲಿ ಹುದುಗಿ ಹರಿಯುತ್ತಿದ್ದ ಹಾಸ್ಯದ ಹೊಳೆಯನ್ನು ಕಂಡುಹಿಡಿದು ಅದನ್ನು ಬಣ್ಣಿಸಬಲ್ಲ ಸ್ವಭಾವಸಿದ್ಧ ವೈಖರಿ. ಅದಕ್ಕೆ ಎಂದಿಗೂ ಜಯವಿರಲಿ" – ಎಂದಿದ್ದಾರೆ. ಗ್ರಾಮೀಣ ಬದುಕಿನ ವಿವಿಧ ಮುಖಗಳನ್ನು ಚಿತ್ರಿಸುವಲ್ಲಿ ಗೊರೂರರು ಬಳಸುವ ತಂತ್ರವನ್ನು ಬೇಂದ್ರೆಯವರು ಚೆನ್ನಾಗಿ ವಿವರಿಸಿದ್ದಾರೆ. ಒಂದು ಕಡೆ ಬ್ರಾಹ್ಮಣರು, ಮತ್ತೊಂದು ಕಡೆ ಒಕ್ಕಲಿಗರು ಹಾಗೂ ದಲಿತರ ನಡುವೆ ಏರ್ಪಡುತ್ತಿದ್ದ ಸರಸ ವಿರಸಗಳನ್ನೂ ಶಿಥಿಲವಾಗುತ್ತಿರುವ ಬ್ರಾಹ್ಮಣ್ಯದ ರೀತಿ ನೀತಿಗಳನ್ನೂ ವಿವರಿಸುವಲ್ಲಿ ಗೊರೂರರ ಲೇಖನಿ ತೋರುವ ಸಂಯಮ, ಸಹಾನುಭೂತಿ ಅನ್ಯತ್ರಕಾಣಸಿಗದು.

ಗೊರೂರರ ಹಾಸ್ಯದ ಬೆನ್ನೆಲುಬು ಜೀವನ ವಿಮರ್ಶೆಯೇ ಆಗಿರುವುದರಿಂದ ಗಟ್ಟಿಯಾಗಿ, ಅಪ್ಪಟದೇಸಿಯಾಗಿ, ಉಳಿದುಕೊಂಡು ಸಾರ್ಥಕವೆನ್ನಿಸಿದೆ. ಅವರದೇ ಪಾತ್ರ ಸೀನಪ್ಪ. ಆತನ ಹಲ್ಲುಗಳು ಎಷ್ಟು ಗಟ್ಟಿಯಾಗಿದ್ದವೆಂದರೆ ಅವನು ಕಬ್ಬನ್ನು ಅಗಿದು ತಿಂದು ಸಿಪ್ಪೆಯನ್ನು ಉಗಿದರೆ ಆ ಸಿಪ್ಪೆಗೆ ಇರುವೆಗಳೂ ಕೂಡ ಮುತ್ತುತ್ತಿರಲಿಲ್ಲವತೆ. ಆ ಸೀನಪ್ಪನ ಹಲ್ಲುಗಳಂತೆಯೇ ಗೊರೂರರ ಲೇಖನಿಯ ಹಲ್ಲುಗಳೂ

ಬದುಕಿನ ರಸ ಸರ್ವಸ್ವವನ್ನೂ ಜೀರ್ಣಿಸಿಕೊಳ್ಳುವಷ್ಟು ಬಲಿಷ್ಠವಾಗಿವೆ. ಗೊರೂರರ ಬರವಣಿಗೆ ಎಂದರೆ ನಗೆಯ ರೇಖೆಗಳಲ್ಲಿ ಹಳ್ಳಿಯ ಬದುಕಿನ ವಿಶ್ವರೂಪವನ್ನು ಚಿತ್ರೀಕರಿಸಿರುವ ಕಲೆ. ಬೆಸ್ತರ ಕರಿಯ, ಶಾಲುಸಾಬಿ, ಗರುಡಗಂಬದ ದಾಸಯ್ಯ, ಅಂಬಿಗ, ಕ್ಷೌರಿಕ, ದಪ್ಪ ಹೊಟ್ಟೆಯ ಜೋಡಿದಾರರು, ಕಾಡು, ನಾಡು, ಉತ್ಸವಗಳು, ಧಾರ್ಮಿಕ ಆಚರಣೆಗಳು, ಹೇಮಾವತಿಯ ಕಡುಗಳಲ್ಲಿ ಬಟ್ಟೆ ಒಗೆಯುತ್ತಲೇ ಊರಿನ ಜನರನ್ನು ಜಾಲಾಡುವ ಲಲನೆಯರು, ಜನರ ಸಂಘಜೀವನದ ವಿಶಿಷ್ಟಚರ್ಯೆಗಳು, ಲೋಭಿಗಳು, ಉದಾರಿಗಳು, ಘಟಿಂಗರು, ಮುಗ್ಧರು ಇಂಥ ಎಲ್ಲರನ್ನೂ ಎಲ್ಲವನ್ನೂ ಏಕತ್ರವಾಗಿ ಬೆಸೆಯುವ ಸಾವಯವ ಸತ್ವದಿಂದ ಗೊರೂರರ ಕೃತಿಗಳು ಕಂಗೊಳಿಸುತ್ತವೆ. ಕಾದಂಬರಿ, ಜೀವನ ಚರಿತ್ರೆ, ಸಾಹಿತ್ಯ ವಿಮರ್ಶೆ, ಅನುವಾದ ಲೋಕದಲ್ಲೂ ಮಿಂಚಿದ್ದಾರೆ. ಆದರೂ ಅವರ ನೈಜಸತ್ವ ಪ್ರಕಟವಾಗಿರುವುದು ಸಣ್ಣಕತೆ – ಪ್ರಬಂಧಗಳ ಎರಡು ಗಡಿಗಳಲ್ಲಿ ಧಾರಾಳವಾಗಿ ಸಂಚರಿಸುವ ಲವಲವಿಕೆಯ ಗದ್ಯದಲ್ಲಿ.

ಜಾನಪದ ನಿರಾಭರಣ ಸೌಂದರ್ಯದಂತೆ ಗೊರೂರರ ಗದ್ಯ. ಅದರಲ್ಲಿ ನಯ ನಾಜೂಕು, ಸುಧಾರಣೆ, ಒಪ್ಪ ಮೊದಲಾದ ನಾಗರೀಕ ಸೌಂದರ್ಯವರ್ಧಕ ಮುಲಾಮುಗಳಲ್ಲಿ, ಒರಟುತನ, ವಿವರ್ಣತೆ, ವಿಷಯ ಪರತೆ, ಸ್ಪಷ್ಟೋಕ್ತಿ ಮೊದಲಾದ ನೈಜಸತ್ವವಿದೆ. ಈ ಜಾನಪದ ಪ್ರತಿಭೆ ಅವರ ಬರಹಗಳಲ್ಲಿ, ಭಾಷೆಯಲ್ಲಿ, ವಿಚಾರವಂತಿಕೆಯಲ್ಲಿ, ವಸ್ತುವಿನ ಆಯ್ಕೆಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಉದಾಹರಣೆಗೆ ಅವರ 'ಗರುಡಗಂಬದ ದಾಸಯ್ಯ' ಎಂಬ ಪ್ರಬಂಧವನ್ನು ನೋಡಬಹುದು:.

"ಅವರ ಊರಿನ ದಾಸಯ್ಯನೊಬ್ಬನಿಗೆ ಇವರು ಯಾವುದೋ ಒಂದು ಗಳಿಗೆಯಲ್ಲಿ ಬೆಂಗಳೂರಿನಿಂದ ಒಂದು ಗರುಡಗಂಬವನ್ನು

ತಂದುಕೊಡಲು ಒಪ್ಪಿಕೊಳ್ಳುತ್ತಾರೆ. ಮಾತಿಗೆ ತಪ್ಪದೆ ಬೆಂಗಳೂರಿನಲ್ಲಿ ಅದನ್ನು ತಂದಿಟ್ಟುಕೊಂಡು ಎಲ್ಲರ ವಕ್ರದೃಷ್ಟಿಗೆ ಪಾತ್ರರಾಗುತ್ತಾರೆ. ಬೆಂಗಳೂರಿನಲ್ಲಿ ಇರುವ ತನಕವೂ ಅವರನ್ನು ಗ್ರಹಚಾರ ಕಾಡುತ್ತದೆ. ಕೊನೆಗೆ ಹೇಗೋ ಅದನ್ನು ರೈಲಿನಲ್ಲಿ ಸಾಗಿಸುತ್ತಾರೆ. ಅವರ ವೇಷಭೂಷಣಗಳೂ ಅಪ್ಪಟ ಗ್ರಾಮೀಣದೇ ತಾನೆ! ರೈಲು ಪ್ರಯಾಣದಲ್ಲೂ ಅವರಿಗೆ ಗ್ರಹಚಾರ ಕಾದಿತ್ತು. ಅವರು ಉಟ್ಟಿದ್ದು ಮಾಸಿದ ಒಂದು ಬಿಳಿಯದಟ್ಟಿ. ಬಿಗಿಯಾಗಿ ಹೊಟ್ಟೆಯ ಗಾತ್ರಕ್ಕೆ ಮೇಲೆದ್ದ ಖಾದಿಯ ಅಂಗಿ, ಕೊಳೆಯಾದ ಅಂಗವಸ್ತ್ರ. ಆ ಅಂಗವಸ್ತ್ರದ ತುದಿಗೆ ಒಂದು ಸೌತೇಕಾಯಿಯ ಗಂಟು, ಕ್ಷೌರವಿಲ್ಲದ ಚೂಪಾದ ಅರದಂತಿದ್ದ ಕರಿಯ ಗಡ್ಡ. ಇಂಥ ವೇಷದಲ್ಲಿದ್ದ ಗೊರೂರರು ಗರುಡಗಂಡ ಹಿಡಿದು ಹೊರಟರೆ ದಾರಿಯುದ್ದಕ್ಕೂ ಪ್ರೇಕ್ಷಣೀಯ ವ್ಯಕ್ತಿಯಾಗದೇ ಇದ್ದಾರೆಯೇ? ರೈಲಿನಲ್ಲೂ ಅವರ ಪಕ್ಕದಲ್ಲಿ ಕೂರಲು ಮುಜುಗರ ಪಟ್ಟುಕೊಂಡದ್ದು ಆಶ್ಚರ್ಯವೇನಲ್ಲ. ಕೊನೆಗೆ ತಾವು ದಾಸಯ್ಯನಲ್ಲವೆಂದು ಸಾಬೀತು ಮಾಡಲು ಇಂಗ್ಲೀಷಿನಲ್ಲಿ ಮಾತನಾಡಲು ಹೊರಡುತ್ತಾರೆ. ಅಲ್ಲಿಗೂ ಆ ಪ್ರಯಾಣಿಕ ನಂಬದೆ "ಈ ದಾಸಯ್ಯನಿಗೆ ಇಂಗ್ಲೀಷ್ ಬೇರೆ ಬರುತ್ತದೆ" ಎನ್ನಬೇಕೆ. ಇಷ್ಟೆಲ್ಲಾ ಬವಣೆಗಳನ್ನು ಅನುಭವಿಸಿ ಮಾವಿನಕೆರೆ ರೈಲ್ವೆ ನಿಲ್ದಾಣದಲ್ಲಿ ಇಳಿದು ಎಲ್ಲರ ಕಣ್ಣಿಗೆ ಬೀಳುವುದು ಬೇಡವೆಂದು ಮುಖ್ಯ ಗೇಟನ್ನು ತಪ್ಪಿಸಿ ಬೇರೊಂದು ಕಡೆ ಹೊರಟರೆ ಹದ್ದುಗಣ್ಣಿನ "ಟಿಕೆಟ್ ಕಲೆಕ್ಟರ್" ಯಾವೋನಯ್ಯ ದಾಸಯ್ಯ, ಟಿಕೆಟ್ ಇಲ್ಲದೆ ಹೋಗ್ತಾಇರೋನು ಎಂದು ಗದರಿಸಬೇಕೆ! ಇದು ಅವರು ಪಟ್ಟ ಕಷ್ಟಗಳಲ್ಲಿ ಶೃಂಗಪ್ರಾಯವಾದದು. ಕೂಡಲೇ ಗೊರೂರರು ಟಿಕೆಟ್ಟನ್ನು ಅವನ ಮುಖದ ಮೇಲೆ ಎಸೆದು "ನಾನಲ್ಲ ದಾಸಯ್ಯ

ನಿಮ್ಮಪ್ಪ” ಎಂದು ಆ ಪಾಪದ ಪ್ರಾಣಿಯ ಮೇಲೆ ತಮ್ಮ ಸಿಟ್ಟನ್ನೆಲ್ಲಾ ಕಾರಿ ಹೊರಟುಹೋಗುತ್ತಾರೆ. ತಾತ್ಕಾಲಿಕ ದಾಸಯ್ಯನ ಪಟ್ಟದಲ್ಲಿ ಅವರು ಲೋಕವನ್ನು ಕಂಡರೀತಿ, ಲೋಕ ಅವರನ್ನು ನಡೆಸಿಕೊಂಡ ಬಗೆ, ಅನ್ಯಪಾತ್ರದಲ್ಲಿ ಅವರು ಅನುಭವಿಸಿದ ದ್ವಂದ್ವ ಇವೆಲ್ಲಾ ಅಪ್ರಯತ್ನ ಪೂರ್ವಕವಾಗಿ ಹಾಸ್ಯದ ಲೇಪ ಪಡೆದು ಒಂದು ಉತ್ತಮ ಕಥಾಪ್ರಬಂಧವಾಗಿದೆ.

ಹಾಸ್ಯ ವಿನೋದಗಳು ಮಾನವನ ಬದುಕನ್ನು ಸಹ್ಯವಾಗಿಸುತ್ತವೆ. ಜೀವನ ಲವಲವಿಕೆಯಿಂದ ಕೂಡಿರುವಂತೆ ಇವು ನೆರವಾಗುತ್ತವೆ. ಹಾಸ್ಯವೆಂದರೆ ಶ್ರೀ ಅರವಿಂದರು ಹೇಳಿದಂತೆ, “ಕಂಬನಿಯನ್ನು ನಗೆಯನ್ನಾಗಿ ಪರಿವರ್ತಿಸುವ ಕಲೆ” ಹಾಗೂ ಕರ್ಮಕೌಶಲ. ಅಂಥ ಕುಶಲಕಲೆಯನ್ನು ಮೈಗೂಡಿಸಿಕೊಂಡವರು ಗೊರೂರರು. ಆದ್ದರಿಂದಲೇ ಅವರ ಜೀವನದಲ್ಲಿದ್ದಂತೆ, ಸಾಹಿತ್ಯದಲ್ಲೂ ನಿರಂತರವಾಗಿ ಹಾಸ್ಯರಸವನ್ನು ತುಂಬಿದ್ದಾರೆ. ಯಾಂತ್ರಿಕ ಬದುಕಿನ ಮರಳಿನಲ್ಲಿ ಸಿಕ್ಕಿ ನರಳಾಡುತ್ತಿರುವ ಇಂದಿನ ಸಮಾಜದ ಜನರಿಗೆ ಹಾಸ್ಯ ಒಂದು ಕನಸು. ದಿನಕಳೆದಂತೆ ವ್ಯಕ್ತಿ ನಗುವ ಪರಿಪಾಠವನ್ನು ಮರೆಯುತ್ತಿದ್ದಾನೋ ಎನಿಸುತ್ತದೆ. ಆದ್ದರಿಂದಲೇ ಗೊರೂರರ ಹಾಸ್ಯ ಚಿತ್ರಗಳನ್ನು ಮತ್ತೆ ಮತ್ತೆ ಓದುವಾಗ ಅಲ್ಲಿ ಚಿತ್ರಿತವಾಗಿರುವ ಲೋಕ ಕನಸಿನ ರಾಜ್ಯವೇನೋ, ಅಲ್ಲಿನ ವ್ಯಕ್ತಿಗಳು ಹುಚ್ಚು ಆದರ್ಶದ ಗೊಂಬೆಗಳೇನೋ ಎನ್ನಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ. ತಮ್ಮ ಜೀವನದ ಬಹುಪಾಲು ಭಾಗವನ್ನು ಹಳ್ಳಿಯ ಕಡುಕಷ್ಟ ಕಾರ್ಪಣ್ಯಗಳ ನಡುವೆ ಕಳೆದರೂ ಅವರ ಜೀವನೋತ್ಸಾಹವನ್ನು ಕಂಡು ಎಂಥವರೂ ಕರುಬುತ್ತಾರೆ. ಬದುಕಿನ ಬಗೆಗೆ ಅವರು ತಾಳಿದ ಆಸಕ್ತಿ, ಪ್ರೀತಿ ಇಂದು ವಿರಳ.

ಗೊರೂರರ ಹಾಸ್ಯ ದೃಷ್ಟಿಯಲ್ಲಿ "ಸೊನೆಯಿದ್ದರೂ ಮೊನೆ ಇಲ್ಲ!" ಅವರ ಬಹುಪಾಲು ಪಾತ್ರಗಳು ಹಾಸ್ಯರಸದಲ್ಲಿ ಎದ್ದಿತೆಗೆದಂತೆ ಚಿತ್ರಿತವಾಗಿವೆ. ಅತಿಶಯೋಕ್ತಿಯೇ ಈ ಚಿತ್ರಗಳಿಗೆ ಜೀವಾಳವಾಗಿರುವುದರಿಂದ ಹಾಸ್ಯಕ್ಕೆ ಹುರುಪು ಬರುತ್ತದೆ. "ಹಳ್ಳಿಯ ಜನತೆ ಏನು ಹೇಳಿತು? ಏನು ಹೇಳಲಿಕ್ಕಿಲ್ಲ? ಕಾವೇರಿಯ ಪ್ರವಾಹ ಎಷ್ಟು ಏರಿತ್ತು?" ಎಂದು ಕೇಳಿದರೆ, "ಹೆಂಗಸರು ತಮ್ಮ ಮನೆ ಮುಂದೆ ನಿಂತುಕೊಂಡೇ ಸೀರೆ ಒಗೆದರು" ಎನ್ನುತ್ತಾರೆ. ಮದುವೆಯ ದಿನಗಳಲ್ಲಿ ತುಂಬಿ ಹರಿಯುವ ಕಾವೇರಿಯನ್ನು ದಾಟದ ಮುದುಕರು ಆಚೆ ದಂಡೆಯಲ್ಲಿರುವ ವಧು-ವರರಿಗೆ ಇಲ್ಲಿಂದಲೇ ಅಕ್ಷತೆ ಹಾಕಿ ಆಶೀರ್ವದಿಸುತ್ತಾರೆ. ಹೀಗೆ ವಿಷಯ ನಿರೂಪಣೆ ಓದುಗನನ್ನು ನಗಿಸುವಲ್ಲಿ ಸಫಲವಾಗುತ್ತದೆ. ವಾಸ್ಕೋಡಿಗಾಮ, ಇಂಜಿನ್ ಯಾಲಕ್ಕಿ, ಏಳುವೊಳದ ಈರಿ, ಐಯ್ಯಂಗಾರರ ಮೊಹರಮ್, ಇವುಗಳ ವರ್ಣನೆಗಳನ್ನು ಕೇಳಿ ನಕ್ಕವರು ಆ ವ್ಯಕ್ತಿಗಳನ್ನು ಮರೆಯಲು ಸಾಧ್ಯವೇ ಇಲ್ಲ.

'ಹಳ್ಳಿಯ ಚಿತ್ರಗಳು', 'ನಮ್ಮ ಊರಿನ ರಸಿಕರು', 'ಬೈಲಹಳ್ಳಿಯ ಸರ್ವೆ' ಇವು ಮೂರು ಸೇರಿ ಗೊರೂರರ ಹಾಸ್ಯ ಪುರಾಣದ ಒಂದು ಚಕ್ರವನ್ನು ಸೃಷ್ಟಿಸಿದೆ. ಹಾಸ್ಯದ ಒಂದು ವಿಚಿತ್ರಲೋಕ ಅಲ್ಲುಂಟು. ಅಲ್ಲಿ ಗೊರೂರರು ಸೃಷ್ಟಿಸಿರುವ ಘಟನೆಗಳು, ಪಾತ್ರಗಳು, ಹಾಸ್ಯದ ಹತ್ತು ಮುಖಗಳನ್ನೂ ನಗೆಯ ನಾನಾಸ್ತರಗಳನ್ನೂ ತೋರಿಸುತ್ತದೆ. ನಮ್ಮ ಕಾದಂಬರಿಕಾರರನ್ನು ಬಿಟ್ಟರೆ ಇನ್ನಾರೂ ಅವರು ಸೃಷ್ಟಿಸಿರುವಷ್ಟು ವೈವಿಧ್ಯಪೂರ್ಣ ರಸಮಯ ವ್ಯಕ್ತಿಗಳನ್ನು ಸೃಷ್ಟಿಸಿಲ್ಲವೆಂದು ಹೇಳಬಹುದು. ಭಾವನವರು, ನಾಣಿ, ಮೀಸೆಗುಂಡ, ಶೀನಪ್ಪ, ಬೋರ, ತೂರ, ಭಾವುಟದ

ಮಣೆಗಾರು, ಶಾಲುಸಾಬಿ, ಕಾಸೆಗಿಡ್ಡ, ಕರಿತಿಮ್ಮ, ವೇಷ್ಟಿಕುಬ್ಜ, ಜೋಡಿದಾರರು, ಬೆಸ್ತರ ಕರಿಯ ಇವು ಮರೆಯಲಾಗದ ವ್ಯಕ್ತಿವಿಶೇಷಗಳು.

ಗೊರೂರರ ಕೃತಿಗಳು ಒಂದು ಕಾಲದ ಜೀವನ ವಿಧಾನ ಹಾಗೂ ಅಲ್ಲಿಯ ಪರಿಸರವನ್ನು ಕಟ್ಟಿಕೊಡುವ ಸಾಹಿತ್ಯದ ಹಾಗೂ ಸಾಂಸ್ಕೃತಿಕ ದಾಖಲೆಗಳು. "ಸಾಹಿತ್ಯ ಸಮಾಜದ ಪ್ರತಿಬಿಂಬ ಮಾತ್ರವಲ್ಲ ಗಿತಬಿಂಬವೂ ಹೌದು" ಎಂಬ ಮಾತಿಗೆ ಗೊರೂರರ ಮೊತ್ತ ಸಾಹಿತ್ಯ ಒಂದು ಉತ್ತಮ ನಿದರ್ಶನ. ಜಗತ್ತಿನ ಸಂಸ್ಕೃತಿಯ ಒಂದು ಉತ್ತಮ ಭಾಗ ಹೇಮಾವತಿ–ನದಿ ತೀರದ ಗೊರೂರಿನಲ್ಲಿ ದಾಖಲುಗೊಂಡಿದೆ. ಅಪ್ಪಟ ಗ್ರಾಮೀಣ ಪರಿಸರದ ತಮ್ಮ ಸಾಹಿತ್ಯದಲ್ಲಿ ಗೊರೂರರು ಮಣ್ಣಿನ ವಾಸನೆಯೊಂದಿಗೇ ಅದರ ಘಾಟು–ಗಮ್ಮತ್ತನ್ನೂ, ಲಾಸ್ಯ ತಾಂಡವವನ್ನೂ ಸಮೀಕರಿಸಿದ ಸತ್ವಶಾಲಿ ಬರಹಗಾರರಾಗಿದ್ದಾರೆ,

ಗೊರೂರರ ವಿರಳವಾದ ಈ ಹಾಸ್ಯ ಪ್ರತಿಭೆಯ ರಹಸ್ಯವೇನು? ಎಂಬ ಕುತೂಹಲ ಪ್ರತಿಯೊಬ್ಬ ಓದುಗನಿಗೂ ಸಹಜ. ನಮಗೆ ಗೋಚರವಾಗದ ಪ್ರಸಂಗ ಮತ್ತು ವೈಲಕ್ಷಣ್ಯಗಳು ಗೊರೂರರ ಸೂಕ್ಷ್ಮದೃಷ್ಟಿಗೆ ವಿಶದವಾಗಿ ಗೋಚರವಾಗುತ್ತವೆ. ವ್ಯಕ್ತಿ ಸಾಮಾಜಿಕ ಬದುಕಿನಲ್ಲಿ ಸುಖ–ಸಂತೋಷ ಹಾಗೂ ನೆಮ್ಮದಿಯನ್ನು ಕಾಣುವಂತಾಗಬೇಕು. ಅತಿಯಿಂದ ತನಗೂ ಕ್ಷೇಮವಿಲ್ಲ, ಸಮಾಜಕ್ಕೂ ಕ್ಷೇಮವಿಲ್ಲ. ಆದ್ದರಿಂದ ತನ್ನ ಸ್ವಭಾವದಲ್ಲಿರುವ ಲೋಪ ದೋಷಗಳನ್ನು ತಿದ್ದಿಕೊಂಡು ತಾನೂ ನೆಮ್ಮದಿಯಿಂದ ಬಾಳಬೇಕು. ಹಾಗೆಯೇ ಇತರರನ್ನೂ ನೆಮ್ಮದಿಯಿಂದ ಬಾಳಲು ಬಿಡಬೇಕು. ಈ ನಿಟ್ಟಿನಲ್ಲಿ ವ್ಯಕ್ತಿಗಳ ಹಾಗೂ ಸಮಾಜದ ಲೋಪದೋಷಗಳನ್ನು ಯಾವ

ಸದ್ದುಗದ್ದಲವೂ ಇಲ್ಲದೆ ತಮ್ಮ ಸಾಹಿತ್ಯದ ಮೂಲಕ ತಿದ್ದುವ ಪ್ರಯತ್ನ ಮಾಡಿದ್ದಾರೆ.

ಅತಿ ಮಡಿವಂತಿಕೆ, ನಾಜೂಕು, ಅತಿ ಗ್ರಾಮೀಣತೆ, ಅತಿ ಒಳ್ಳೆಯತನ, ಅತಿಧ್ಯೇಯ, ನಿಷ್ಠೆ ಇವುಗಳಾವೂ ಇವರ ಹಾಸ್ಯದಿಂದ ಮುಕ್ತವಾಗಿಲ್ಲ. "ದಡದಲ್ಲಿದೆ, ದಡದಲ್ಲಿದೆ" ಎಂದು ಉರಹೊಡೆಯುವ ಹುಡುಗನಿಂದ ನಮ್ಮ ವಿದ್ಯಾಭ್ಯಾಸ ಕ್ರಮಕ್ಕೆ ಇವರು ಬಾರುಕೋಲು ಬಾರಿಸಿದ್ದಾರೆ. "ಉಣ್ಣೆ, ಉಣ್ಣೆ" ಎಂಬ ರೈತನ ವಾಕ್ಯದಲ್ಲಿ ನಮ್ಮ ಶ್ರಾದ್ಧದ ಮಡಿವಂತಿಕೆಯನ್ನು ಕಂಡು ನಕ್ಕಿದ್ದಾರೆ. "ಮಾವಿನ ತೋರಣವನ್ನೇ ಮೈಗೆ ಕಂಬದಂತೆ ಸುತ್ತಿಕೊಂಡು ಅಧಿಕಾರಿಯ ಮುಂದೆ ನಡೆಯುವ ಮೆರವಣಿಗೆಯ ಪ್ರಸಂಗದಲ್ಲಿ ನಮ್ಮ ಸಾಮಾನ್ಯ ಜನ ಅಧಿಕಾರಿಗಳಿಗೆ ತೋರಿಸುವ ಅತಿಯಾದ ಗೌರವದ ಲೇವಡಿ ಇದೆ. ಹೀಗೆ ಗೊರೂರರ ಚಿತ್ರಗಳು ಅನಂತ. ಇವರ ಸಾಹಿತ್ಯ ರಚನೆಯ ಉದ್ದೇಶ ಕೇವಲ ವಿನೋದವಲ್ಲ. ಯಾವುದೇ ಒಂದು ಪಂಥದ ಜಾಹಿರಾತಲ್ಲ. ಬೋಧನೆಯಲ್ಲ. ಇವೆಲ್ಲ ಮನುಷ್ಯ ಸ್ವಭಾವದ ದರ್ಶನ. ಹೀಗಾಗಿ ಗೊರೂರರು ಸಂಪ್ರದಾಯಸ್ಥ ಕ್ರಾಂತಿವಾದಿಗಳೆನಿಸಿಕೊಂಡಿದ್ದರೂ ಕ್ಷೇಮವಾದಿಗಳು.

ಈ ಕಾರಣದಿಂದಲೇ ಪರಂಪರೆ–ಪರಿವರ್ತನೆ–ಸಂಘರ್ಷ ಈ ಎಲ್ಲಾ ಮೌಲ್ಯಗಳೂ ಗೊರೂರರಲ್ಲಿ ಕಂಡುಬರುತ್ತವೆ. 'ಶೀನಪ್ಪನ ವಾಕಿಂಗ್ ದುರಂತ', 'ಬೈಲಾಟದ ವರ್ಣನೆ', ಭಾವನ ಮನೆಯಲ್ಲಿ ಶ್ರಾದ್ಧದ ದಿನ ಬ್ರಾಹ್ಮಣರು ಪಟ್ಟ ಪಾಡು' ಇವು ಗೊರೂರರ ಕೃತಿಗಳಲ್ಲಿ ಬರುವ ಕೆಲವು ಪ್ರಮುಖ ಹಾಸ್ಯಸನ್ನಿವೇಶಗಳು. ಮನುಷ್ಯ ಸ್ವಭಾವದ ಅಂಕು–ಡೊಂಕುಗಳ ಮೇಲೆ ಭೂತಗನ್ನಡಿ ಹಿಡಿದು ಉತ್ಪ್ರೇಕ್ಷೆಯಿಂದಲೇ

ಹಾಸ್ಯ ಸನ್ನಿವೇಶಗಳನ್ನು ಸೃಷ್ಟಿಸುವುದರಲ್ಲಿ ಗೊರೂರರದ್ದು ಮೇಲುಗೈ. ಸಾಮಾನ್ಯವಾಗಿ ಅವರ ಪಾತ್ರಗಳಲ್ಲಿ ಯಾವುದೇ ವೈಶಿಷ್ಟ್ಯ ವೈಚಿತ್ರ್ಯಗಳನ್ನು ಮೆರೆಸದ ಮಾಮೂಲು ಪಾತ್ರಗಳೇ (Types) ಮೇಲು ನೋಟಕ್ಕೆ ಕಾಣುವ ರೂಪ–ವೇಷಭೂಷಣಗಳನ್ನೂ ಚಲನವಲನಗಳನ್ನೂ ದೈಹಿಕ ಚಹರೆಗಳನ್ನೂ ಪಟ್ಟಿಮಾಡಿ ಕೇವಲ ಎರಡೇ ಆಯಾಮಗಳಿಂದ 'ನುಡಿ ಚಿತ್ರ' ಗಳನ್ನು ಮಿಡಿದು ತೋರಿಸುವುದರಲ್ಲಿ ಗೊರೂರರು ಗಟ್ಟಿಗರು. 'ಬೈಲಹಳ್ಳಿ ಸರ್ವೆ' ಯಲ್ಲಿ ಬರುವ ಪಾತ್ರಗಳೆಲ್ಲವೂ ಹೆಚ್ಚು ಕಡಿಮೆ ಈ ರೀತಿಯವೇ. ಅವುಗಳನ್ನು ಸುಮ್ಮನೆ ವರ್ಣಿಸಿ, ವರದಿ ಮಾಡಿದಾಗ ಹೆಚ್ಚು ಪರಿಣಾಮವಾಗುವುದಿಲ್ಲ. ಆದರೆ ವಿಶಿಷ್ಟ ಲಕ್ಷಣಗಳಿಂದ ತುಂಬಿದ ಈ ವಿನೋದಕರ ಪಾತ್ರಗಳನ್ನು ನಾಟಕೀಯವಾದ ಸನ್ನಿವೇಶದ ಹಿನ್ನೆಲೆಯಲ್ಲಿ ವಿನ್ಯಾಸಗೊಳಿಸಿದಾಗ ವಿರಳಹಾಸ್ಯ ಹೊರಹೊಮ್ಮುತ್ತದೆ.

ಉದಾಹರಣೆಗೆ : ಎರಡನೇ ಬಾರಿಗೆ ಬಂದ ಮೋಜಿನಿದಾರರು ಹಾಗೂ ಅವರ ವಿಚಿತ್ರವೇಷ ಭೂಷಣಗಳು ಇಡೀ ಊರಿನವರ ಮೇಲೆ ಪ್ರಭಾವಬೀರಿದವು. ಅವರು ಬೈಲಹಳ್ಳಿಯನ್ನು ಪ್ರವೇಶಿಸಿದಾಗ ಉಂಟಾದ ಕೋಲಾಹಲ ಹೀಗಿತ್ತು :

"ಹುಡುಗರೆಲ್ಲಾ ಊರು ಬಾಗಿಲಿನ ಅರಳಿಮರದ ಹತ್ತಿರ ಇಣುಕಿ ನೋಡಲು ಪ್ರಾರಂಭಿಸಿದರು. ಊರು ಬಾಗಿಲಿನ ತಿಪ್ಪೆಯಲ್ಲಿ ಮೂರು ಜನ ರೈತರು ಕೆಲಸ ಮಾಡುತ್ತಿದ್ದರು. ಅವರು ಗೊಬ್ಬರವನ್ನು ಗಾಡಿಗೆ ತುಂಬುತ್ತಿದ್ದರು. ಕರಗಿದ್ದ ಗೊಬ್ಬರದಿಂದ ವಾಸನೆ ಬರುತ್ತಿತ್ತು.... ಅವರು ಗೊಬ್ಬರದ ಕೆಲಸವನ್ನು ಅಲ್ಲಿಗೇ ಬಿಟ್ಟು ಮೋಜಿನಿದಾರರ ಕಡೆ ನೋಡುತ್ತಾ ನಿಂತುಕೊಂಡರು. ಅವರ ಕಾಲಿನಿಂದ ಗೊಬ್ಬರದ ರಸ ಕೆಳಕ್ಕೆ ಸೋರುತ್ತಿತ್ತು. ಕೆರೆಯಿಂದ ಆರು ಏಳುಜನ ಹೆಂಗಸರು ತಲೆಗಳ

ಮೇಲೆ ಗಡಿಗೆಗಳಲ್ಲಿ ನೀರು ಹೊತ್ತುಕೊಡು ಬರುತ್ತಿದ್ದವರು ಮೋಜಿನಿದಾರರನ್ನು ಕಂಡು, ನೋಡುತ್ತಾ ಅಲ್ಲೇ ನಿಂತರು. ಊರೊಳಗಿನಿಂದ ಗೊಬ್ಬರದ ಮಂಕರಿಗಳನ್ನು ಹೊತ್ತುಕೊಂಡು ಹೊಲಕ್ಕೆ ಹೋಗುತ್ತಿದ್ದ ಐದು ಜನ ಹೆಂಗಸರು ಮಂಕರಿಗಳನ್ನು ತಲೆಯ ಮೇಲೆ ಹೊತ್ತುಕೊಂಡು ಮೋಜಿನಿದಾರರನ್ನು ನೋಡುತ್ತಾ ನಿಂತುಕೊಂಡರು. ಆರೇಳು ಹೆಂಗಸರು ತಲೆಯ ಮೇಲೆ ಗಂಡಂದಿರಿಗೆ ಕುಕ್ಕೆಯಲ್ಲಿ ಹಿಟ್ಟನ್ನೂ, ಕೈಯಲ್ಲಿ ಚೆಂಬಿನಲ್ಲಿ ನೀರನ್ನೂ ತೆಗೆದುಕೊಂಡು ಹೊರಟಿದ್ದವರು ಮುಂದಕ್ಕೆ ಹೋಗದೆ ಅಲ್ಲೇ ಮೋಜಿನಿದಾರರನ್ನು ನೋಡುತ್ತಾ ನಿಂತುಬಿಟ್ಟರು". ಈ ಸ್ತಬ್ಧ ಚಿತ್ರ (still picture) 'ಪಂಚ್' ವ್ಯಂಗ್ಯ ಚಿತ್ರಗಳನ್ನೂ ಚಿತ್ರಕಾರ ಹೊಗಾರ್ತ್‌ನ (Hogarth) ಅತಿರೇಕದ ಹಾಸ್ಯದ ಚಿತ್ರಗಳನ್ನು ನೆನಪಿಗೆ ತಂದುಕೊಡುತ್ತದೆ.

ತಮ್ಮ ಇಳಿವಯಸ್ಸಿನಲ್ಲಿ ಗೊರೂರರು ಅಮೆರಿಕಾ ಪ್ರವಾಸ ಮಾಡಿದರು. ಆ ಸಂದರ್ಭದಲ್ಲಿ ಗಾಂಧೀಜಿಯವರ ಹೆಸರನ್ನು ಎಷ್ಟೊಂದು ಜನ, ಎಷ್ಟೊಂದು ಸಂದರ್ಭಗಳಲ್ಲಿ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂಬುದನ್ನು ಹೇಳುತ್ತಾ, ತಾವು ಅಂಥವರಿರಬಹುದೇ ಎಂದು ತಮಾಷೆ ಮಾಡಿಕೊಳ್ಳುತ್ತಾರೆ. ವ್ಯಕ್ತಿ ಯಾರೇ ಇರಲಿ, ಸಂದರ್ಭ ಯಾವುದೇ ಆಗಲಿ ತಮಗನ್ನಿಸಿದ್ದನ್ನು ಹೇಳಲು ಗೊರೂರರು ಎಂದೂ ಹಿಂಜರಿದವರಲ್ಲ ಎಂಬುದು ಅವರ ಹಲವಾರು ಕೃತಿಗಳಿಂದ ತಿಳಿದು ಬರುತ್ತದೆ. ಈ ಸಹಜ ಸ್ವಭಾವದಿಂದ ಗೊರೂರರು ಬೇರೆಯೇ ಆಗಿ ನಿಲ್ಲುತ್ತಾರೆ.

ಅಮೆರಿಕಾ ಪ್ರವಾಸ ಸಂದರ್ಭದಲ್ಲಿ ಸಸ್ಯಾಹಾರದ ಸಮಸ್ಯೆ ಗೊರೂರರನ್ನು ಕಾಡಿರುವುದು ಕಂಡುಬರುತ್ತದೆ. ಉದಾಹರಣೆಗಾಗಿ

ಈ ಬಗ್ಗೆ ಅವರ ಬಾಯಿಂದಲೇ ಕೆಲವನ್ನು ಕೇಳೋಣ :

"ಫಿಲಿಡೆಲ್ಫಿಯಾ ವಿಮಾನ ನಿಲ್ದಾಣದಲ್ಲಿ (ಗೊರೂರರು) ಉರಿದ ಕೋಳಿ ಮಾಂಸವನ್ನು ಉದ್ದಿನ ವಡೆ ಎಂದು ಭಾವಿಸಿ ಅದನ್ನು ತರಲು ಸಪ್ಲೈಯರ್‌ಗೆ ಹೇಳಿದೆ. ಆಗ ಒಬ್ಬಳು ನನ್ನ ಮೇಜಿನ ಮೇಲೆ ಕಾಗದ ಮುಚ್ಚಿದ ತಟ್ಟೆಯನ್ನು ತಂದಿಟ್ಟಳು. ಅದನ್ನು ಹತ್ತಿರಕ್ಕೆ ಎಳೆದುಕೊಳ್ಳಲು ಹೋದೆ. ರಾಮ ರಾಮ ಹಾವು ಚೇಳು! ಒಂದು ಗಳಿಗೆ ಚೇತರಿಸಿಕೊಂಡು ನೋಡಿದೆ. ಅದು ಉದ್ದಿನ ವಡೆಯಂತೂ ಅಲ್ಲ. ಅದನ್ನು ಮುಟ್ಟುವುದಕ್ಕೂ ನನಗೆ ಧೈರ್ಯವಿಲ್ಲ. ಆ ಹುಡುಗಿಯನ್ನು ಕರೆದು, ಏನನ್ನು ತಂದು ಇಟ್ಟಿದ್ದಿ, ನಾನು ಕೇಳಿದ್ದು ಸಸ್ಯಾಹಾರವನ್ನು ಎಂದೆ. ಆಗ ಆಕೆ ಹೌದು, ಹೌದು, ಅದು ಅತ್ಯಂತ ಸೊಗಸಾದ ಎಳೆಸಾದ ಚಿಕನ್. ಇದು ಅಮೆರಿಕಾದಲ್ಲೆಲ್ಲಾ ಪ್ರಸಿದ್ಧವಾಗಿರುವ ಕೆಂಟಕ್ಕಿ ಚಿಕನ್!" ಎಂದಾಗ ಗೊರೂರರ ಪೇಚಾಟ ನಗೆ ಬರಿಸುವಂಥದ್ದು!

ಮತ್ತೊಂದು ಸಾರಿ ವಿಮಾನ ಪ್ರಯಾಣ ಮಾಡುವಾಗ – ನಾನು ಗಗನ ಸಖಿಯನ್ನು ಕುರಿತು – Have you got anything which is not meat, egg or fish ಎಂದು ಕೇಳಿದೆ. ಅವಳು Yes, we have chicken, bacon fork, ham etc. ಎಂದಳು. ಈ ಮಾತಿನಿಂದ ಗೊರೂರರ ಪರಿಸ್ಥಿತಿ ಏನಾಗಿದ್ದಿರಬಹುದು ಎಂಬುದನ್ನು ಊಹಿಸಿಕೊಳ್ಳಿ.

ಗೊರೂರರು ಸಾಹಿತ್ಯ ಕೃಷಿಗೆ ತೊಡಗಿದ್ದು ತಾನೊಬ್ಬ ಸಾಹಿತಿ ಎನ್ನುವ ಅಧಿಕೃತತೆಯ ಅಹಂನಿಂದ ಅಲ್ಲ. ಅವರು ಮೊದಲಿಗೆ ಗಾಂಧೀ ಪ್ರೇರಿತ ಸಮಾಜ ಚಿಂತನೆಯ ಅಭಿವ್ಯಕ್ತಿ ಹಾಗೂ ಗಾಂಧೀ

ಜೀವನ ಚಿಂತನೆಯಿಂದ ರೂಪುಗೊಂಡಂಥವರು. ಎರಡನೇಯ ಹಂತದಲ್ಲಿ ಅವರು ಸಾಹಿತಿ. ಆದ್ದರಿಂದಲೇ ಅವರ ವ್ಯಕ್ತಿತ್ವದ ಅಧಿಕೃತತೆ ಇರುವುದು ಅವರ ಚಿಂತನೆ ಮತ್ತು ದರ್ಶನದಲ್ಲಿ. ಇದನ್ನು ಆಧಾರ ಮತ್ತು ಅಧಿಕೃತವನ್ನಾಗಿಟ್ಟುಕೊಂಡು ಅವರು ಮುನ್ನಡೆಯುತ್ತಾರೆ. ಒಂದು ಕಡೆ ಪರಕೀಯರಿಂದ ರಾಷ್ಟ್ರ ವಿಮುಕ್ತಿಯನ್ನು ಬಯಸುವ ಚಡಪಡಿಕೆಯಾದರೆ ಮತ್ತೊಂದು ಕಡೆ ನಮ್ಮ ಜಾತಿ ಮತಗಳಲ್ಲಿರುವ ಕ್ರೂರತೆ ಮತ್ತು ಕುಬ್ಜತೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಾರೆ. ಅವರ ಎಲ್ಲ ಕೃತಿಗಳ ಜೀವಧಾತು ಹೀಗೆ ವ್ಯಕ್ತಿ ತನ್ನ ಮತ ಸಂಬಂಧವಾದ ಕ್ಷುಲ್ಲಕ ಮಿತಿಗಳಿಂದ ಮೇಲೆ ಬಂದು ರಾಷ್ಟ್ರಮುಖಿಯಾಗುವುದು.

ಎಲ್ಲಕ್ಕಿಂತ ಹೆಚ್ಚಾಗಿ ಗೊರೂರರು ಜನಪದ ಕವಿಯ ರೀತಿಯಲ್ಲಿ ನೀತಿಯನ್ನು ಬರೆದುದು ನಮಗೆ ಮುಖ್ಯವಾಗುತ್ತದೆ. ಒಂದು ಸಮಾಜದ ಒಳಗೆ ನಿಂತು ಅವರೊಡನೆ ಸಂಭಾಷಿಸುತ್ತಾ ಅವರಲ್ಲಿ ತಾನೂ ಒಬ್ಬ ಪ್ರೇಕ್ಷಕನೂ ಆಗುತ್ತಾ ಬರೆದ ರೀತಿ ನಮ್ಮನ್ನು ಹತ್ತಿರಕ್ಕೆ ಸೆಳೆಯುತ್ತದೆ. ಅವರ ಗಾಂಧೀ ಚಿಂತನೆಗಳು, ಎಷ್ಟೇ ಇರಲಿ, ಆ ಚಿಂತನೆಗಳನ್ನು ಸಂಕೀರ್ಣ ಮಾಡಿ ದೊಡ್ಡ ದೊಡ್ಡ ಬಂಡೆಗಳ ರೀತಿ ಹೊರೆ ಮಾಡಿ ಜನರ ಮೇಲೆ ಅವರು ಹೇರಲು ಹೊರಡಲಿಲ್ಲ. ಅವುಗಳನ್ನು ಅತ್ಯಂತ ಸರಳವಾದ ಆಡುಭಾಷೆಯಲ್ಲಿ ಕನ್ನಡಿಗರಿಗೆ ಉಣಬಡಿಸಿದ್ದಾರೆ. ಆದ್ದರಿಂದಲೇ ಅವರು "ಭಾಷೆ ಎಂಬುದೇ ಅದ್ಭುತ ವಸ್ತು, ಅದರಲ್ಲಿಯೂ ಕನ್ನಡವೇ ಪರಮಾದ್ಭುತ" – ಇದು ಕನ್ನಡ ಭಾಷೆಯ ಬಗೆಗೆ ಗೊರೂರರಿಗಿರುವ ಅಭಿಮಾನ. "ಕನ್ನಡ ಭಾಷಾಭಿಮಾನ ನಮ್ಮ ಜನಗಳಿಗೂ ಬೇಕು, ನಮ್ಮಲ್ಲಿ ಇನ್ನೂ ಬಹಳ ಮಟ್ಟಿಗೆ ಇಂಗ್ಲೀಷ್‌ನ ಮಾನಸಿಕ ಗುಲಾಮರು ಇದ್ದಾರೆ" – ಎನ್ನುತ್ತಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಹಿರಿಯ ಚೇತನಗಳಲ್ಲಿ ಗೊರೂರರು ಒಬ್ಬರು. ವಿದ್ಯಾರ್ಥಿದೆಸೆಯಲ್ಲಿಯೇ ಶಿಕ್ಷಣಕ್ಕೆ ಮುಕ್ತಾಯ ಹಾಡಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ಗೊರೂರರ "ಮೆರವಣಿಗೆ" ಕಾದಂಬರಿ ರಚನೆಗೆ ಈ ಸ್ವಾತಂತ್ರ್ಯ ಹೋರಾಟ ಪ್ರಮುಖ ಪ್ರೇರಣೆ ಹಾಗೂ ಸ್ಫೂರ್ತಿ ಎಂಬುದನ್ನು ಮರೆಯುವಂತಿಲ್ಲ.

ಆದರೆ ಸ್ವಾತಂತ್ರ್ಯ ನಂತರದ ನಮ್ಮ ರಾಷ್ಟ್ರದ ಬದುಕನ್ನು ಕಂಡರೆ ಅಸಹ್ಯ, ಹೇಸಿಗೆಯಾಗುತ್ತದೆ ಎಂದು ಹೇಳುವ ಗೊರೂರರು "ಗಾಂಧೀಜಿಯ ನಂತರ, ಗಾಂಧೀ ಇಸಂ ಹೊರಟುಹೋಯಿತು. ಆ ವಾತಾವರಣವೇ ಇಂದು ನಮಗೆ ಮೈ ಪರಚಿಕೊಳ್ಳುವ ಹಾಗಾಗಿದೆ" ಎನ್ನುವುದು ಗೊರೂರರ ನಿಲುವು" – ಬಹುಶಃ ಈ ಕಾರಣದಿಂದಲೋ ಏನೋ 1947ರ ನಂತರದ ಯಾವುದೇ ಮುಖ್ಯ ಸಾಮಾಜಿಕ ಅನುಭವಗಳನ್ನು ಗೊರೂರರ ಕೃತಿಗಳಲ್ಲಿ ದಟ್ಟವಾಗಿ ಕಾಣಲಾಗುವುದಿಲ್ಲ. ಈ ಬಗ್ಗೆ ಸಂಪೂರ್ಣ ವಿದ್‌ಡ್ರಾಯಲ್ ಕಾಣುತ್ತದೆ. ಈ ಬಗ್ಗೆ ಗೊರೂರರ ಮಾತುಗಳು ಹೀಗಿವೆ : "ಯಾವುದಕ್ಕೆ ರಿಯಾಕ್ಟ್ ಮಾಡಬೇಕು? ಭಾರತೀಯವಾಗಿ ಏನೂ ಆಗಿಲ್ಲ. ಎಲ್ಲ ರಷ್ಯಾ, ಅಮೆರಿಕಾ ಆಗಿಬಿಟ್ಟಿದೆ. ಭಾರತೀಯತ್ವವನ್ನು ನಾವೀಗ ಹುಡುಕಬೇಕಾಗಿದೆ. ಹಳ್ಳಿಗಳಲ್ಲೂ ಹೋಗಿ ಯಂತ್ರ ಹಾಕಿಬಿಟ್ಟಿದ್ದಾರೆ. ಯಾವುದು ನಿಜವಾದ ಗ್ರಾಮೀಣಭಾರತ? ಗಾಂಧೀ ಭಾರತ ಹೋಗಿ ಎಲ್ಲಾ ಪಾಶ್ಚಾತ್ಯೀಕರಣ ಆಗಿಬಿಟ್ಟಿದೆ. ಅನುಕರಣ ಪಟುಗಳು, ಸ್ತ್ರಿಯರು ಸ್ತನ ಬಿಟ್ಟುಕೊಂಡು ಬೀದಿಯಲ್ಲಿ ತಿರುಗುತ್ತಾರೆ. ಯಾವುದಕ್ಕೆ ರಿಯಾಕ್ಟ್ ಮಾಡಬೇಕು? ಎಲ್ಲಾ ಹುಸಿಯಾಗಿ ಕಾಣಿಸಿದೆ. ನಮ್ಮ ಭಾರತ ಅಂತ ಫೀಲಿಂಗ್

ಬರೋದೇ ಇಲ್ಲ. ಇದನ್ನು ಪ್ರೀತಿಸೋದಕ್ಕೆ ಆಗೋದೇ ಇಲ್ಲ" – ಎಂದಿದ್ದಾರೆ.

ಜೀವನ ಮತ್ತು ಸಾಹಿತ್ಯಗಳ ಅರ್ಥಪೂರ್ಣ ಬೆಸುಗೆ ಗೊರೂರರ ಸಾಧನೆ. ಸಮಕಾಲೀನ ಸಾಹಿತ್ಯ ಚಳುವಳಿಗಳಿಗೂ ಗೊರೂರರಿಗೂ ಇರುವ ವ್ಯತ್ಯಾಸವನ್ನು, ಅವರ ಸಾಹಿತ್ಯಕ ತತ್ವಗಳನ್ನು ಗಮನಿಸಿದಾಗ ಮನವರಿಕೆಯಾಗುತ್ತದೆ. ಈ ಬಗ್ಗೆ ಗೊರೂರರ ಅಭಿಪ್ರಾಯ ಹೀಗಿದೆ: "ಜೀವನದಲ್ಲಿ ಒಳ್ಳೆಯುದ್ದೇನಿದೆ? ವಿಚಿತ್ರವಾದದ್ದೇನಿದೆ? ಸ್ವಾರಸ್ಯವಾದದ್ದೇನಿದೆ? ಅದನ್ನು ಬರೆದೆ. ಆಮೇಲೆ ಸಣ್ಣ ಕಿರುಕುಳಗಳನ್ನು ನಾನು ಯೋಚಿಸುತ್ತಿರಲಿಲ್ಲ. ಯಾವ ತತ್ವವನ್ನೂ ಹಿಡಿದು ಬರೀಲಿಲ್ಲ. ಜೀವನದ ಅನುಭವವನ್ನು ಹಾಗೆ ಬರೆದೆ. ಲವಲವಿಕೆ, ಮಾನವೀಯತೆಯ ಉತ್ತಮ ಅಂಶಗಳನ್ನು ಕಂಡು ಬರೆದಿದ್ದೇನೆ. ಕಷ್ಟ ನಮ್ಮನ್ನು ತುಳಿಯೋಕೆ ಬಿಡಬಾರದು" – ಎನ್ನುತ್ತಾರೆ.

ಗಾಂಧಿ ಮತ್ತು ಗ್ರಾಮ ಗೊರೂರರ ಎರಡು ಪ್ರಮುಖ ಕೇಂದ್ರಗಳು. ಗೊರೂರರ ಗ್ರಾಮೀಣ ಚಿತ್ರಣಗಳಲ್ಲಿ ಅನನ್ಯ ಚೆಲುವಿದೆ, ಸಾಮರಸ್ಯವಿದೆ. ಆದರೆ ಬಡತನ, ದಬ್ಬಾಳಿಕೆ, ಹಿಂಸೆ, ಶೋಷಣೆ, ಘರ್ಷಣೆ ಇತ್ಯಾದಿಗಳು ಕಾಣುವುದಿಲ್ಲವೆಂಬ ಓದುಗನ ಪ್ರಶ್ನೆಗೆ, ಗೊರೂರರ ಉತ್ತರ ಹೀಗಿದೆ : "ಹಳ್ಳಿಗಳಲ್ಲಿಯ ಘರ್ಷಣೆಯ ಅರಿವಿತ್ತು. ಆದರೆ ಈಗಿನವರಂತೆ ಒಂದು ತತ್ವಕ್ಕೆ ಬಿದ್ದು ಅದನ್ನು ಅತಿಶಯ ಮಾಡಲಿಲ್ಲ. ಹಳ್ಳಿಗಳಲ್ಲಿ ಬರೀ ಘರ್ಷಣೆ ಇದ್ದಿದ್ದರೆ ಎರಡು ಸಾವಿರ ವರ್ಷಗಳಿಂದ ಅವು ಬದುಕಿರುತ್ತಿರಲಿಲ್ಲ. ಈಗಿನವರಿಗೆ ಹಳ್ಳಿ ಹಾಗೆ ಕಂಡಿದೆ, ಅಷ್ಟೆ. ಕೆಟ್ಟದ್ದನ್ನು ನೋಡಲಿಲ್ಲ ಅಂತಲ್ಲ, ಕೆಟ್ಟದ್ದನ್ನೇ ಹುಡುಕುತ್ತಾ ಹೋಗಲಿಲ್ಲ. ಈಗಿನವರಿಗೆ ಹಳ್ಳಿ ಕ್ಷಯರೋಗದ ಆಸ್ಪತ್ರೆ ಇದ್ದಹಾಗೆ" – ಎಂದಿದ್ದಾರೆ. ಇವರ

ದೃಷ್ಟಿಯಲ್ಲಿ ಗ್ರಾಮೀಣ ಬದುಕು ನೆಮ್ಮದಿಯ ನೆಲೆಯಾದರೆ, ಪಟ್ಟಣದ ಬದುಕು ಬರೀ ಭ್ರಮೆ ಎನಿಸಿದೆ. ಗ್ರಾಮೀಣ ಬದುಕಿನ ಸಮಸ್ಯೆಗಳ ಮೂಲ ಅನಕ್ಷರತೆ, ಅಜ್ಞಾನ, ಬಡತನ ಎಂಬುದರ ಅರಿವಿದ್ದ ಗೊರೂರರು ಗ್ರಾಮೀಣ ಜನರ ವಿದ್ಯೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಅವರು ತಮ್ಮ 'ಪಾಠ ಶಾಲೆ ಅಡಿಗೆ ಮನೆಯಾದಾಗ', 'ಮೆರವಣಿಗೆ', ಹೇಮಾವತಿ, 'ನಮ್ಮ ಊರಿನ ರಸಿಕರು' ಮುಂತಾದ ಕಥೆ ಕಾದಂಬರಿಗಳಲ್ಲಿ ವಿದ್ಯೆಯ ಮಹತ್ವವನ್ನು ಎತ್ತಿಹಿಡಿದಿದ್ದಾರೆ.

ಜೀವನದಲ್ಲಿ ಲವಲವಿಕೆಯನ್ನು ತುಂಬುವ ಅರ್ಥಪೂರ್ಣವಾದ ನಂಬಿಕೆ ಸಂಪ್ರದಾಯಗಳ ಪರವಹಿಸುವುದು ಗೊರೂರರ ವಿಶಿಷ್ಟತೆ. ಪರಂಪರೆ ಮತ್ತು ಸ್ವಾನುಭವಗಳ ಅದ್ಭುತ ಹೊಂದಾಣಿಕೆಯಿಂದ ಮೈತಳೆಯುವ ಗೊರೂರರ ರೀತಿ ವಿಸಿಷ್ಟವಾದುದು. ಈ ಬಗ್ಗೆ ಗೊರೂರರೇ ಹೇಳಿರುವ ಮಾತುಗಳು ಹೀಗಿವೆ: "ಸಂಪ್ರದಾಯ ಸರ್ವಸ್ವ ಅಂತ ನಾನು ನಂಬಲಿಲ್ಲ. ಕೆಲವು ಆಚಾರ ವಿಚಾರಗಳು ನಮಗೆ ಶಕ್ತಿ ಕೊಡುತ್ತವೆ" ಎಂದಿದ್ದಾರೆ. ದಲಿತರ ಬಗೆಗಿನ ಗೊರೂರರ ಸ್ಪಷ್ಟ ಅಭಿಪ್ರಾಯ ಹೀಗಿದೆ : "ದಲಿತರ ಬಗ್ಗೆ ನಾನು ಪ್ರತ್ಯೇಕವಾಗಿ ಬರೆಯದೇ ಇದ್ದುದಕ್ಕೆ ಕಾರಣ ನಾನು ಅವರನ್ನು ಬೇರೆ ಎಂದೂ ಭಾವಿಸಿಲ್ಲ, ಅವರೂ ಕೂಡ ನಮ್ಮ ನಿಮ್ಮಂತಹ ಮನುಷ್ಯರು ತಾನೇ. ಹೀಗೆ ಸಮಾನತೆಯ ಕಾರಣಕ್ಕಾಗಿ ಅವರ ಬದುಕಿನ ಬಗ್ಗೆ ವಿಶೇಷ ಒತ್ತು ಬೀಳಲಿಲ್ಲ" ಎಂದಿದ್ದಾರೆ. ಗೊರೂರರ ಮಾನವ ಪ್ರೇಮಕ್ಕೆ ಈ ಮೇಲಿನ ಮಾತುಗಳು ಉತ್ತಮ ನಿದರ್ಶನ.

ಶತಶತಮಾನಗಳಿಂದ ಹೆಣ್ಣು ಶೋಷಣೆಗೆ ಒಳಗಾಗುತ್ತಿರುವ ಬಗ್ಗೆ ಗೊರೂರರು ತೀವ್ರವಾಗಿ ಆಕ್ಷೇಪಿಸಿದ್ದಾರೆ. ತಮ್ಮ ಸಮಕಾಲೀನ

ಸಂದರ್ಭದಲ್ಲಿ ರೂಢಿಯಲ್ಲಿದ್ದ 'ಬಾಲ್ಯವಿವಾಹ ಪದ್ಧತಿ' ಮತ್ತು 'ವಿಧವಾ ವಿವಾಹ ಪದ್ಧತಿ' ಮುಂತಾದ ಸಾಮಾಜಿಕ ಸಮಸ್ಯೆಗಳನ್ನು ಖಂಡಿಸಿದ್ದಾರೆ. ವಿಧವೆಯರ ಬದುಕು ಹಸನಾಗಬೇಕೆಂಬುದು ಅವರ ಅಪೇಕ್ಷೆ. ವೈಯ್ಯಾರಿ, ಬಿಸಿಲುಕುದುರೆ ಮುಂತಾದ ಕತೆಗಳಲ್ಲಿ ಈ ಸಾಮಾಜಿಕ ಪಿಡುಗುಗಳಿಗೆ ಸಮರ್ಥ ಉತ್ತರ ನೀಡಿದ್ದಾರೆ. ಮೋಜಿನಿದಾರರು ಬೈಲಹಳ್ಳಿಯನ್ನು ಸರ್ವೆ ಮಾಡಿಕೊಂಡು ಹೋದಂತೆ ಇವತ್ತಿನ ಪ್ರಪಂಚದಲ್ಲಿ ವಿಜ್ಞಾನವು ಲೋಕದ ಸರ್ವಸ್ವವವನ್ನು ಅಳೆದು, ತೂಕಮಾಡಿ ಗ್ರಹಿಸಿ ಅರ್ಥ ಕಂಡುಹಿಡಿಯಲು ಪ್ರಯತ್ನಿಸುತ್ತಿದೆ. ಆದರೆ ಮನುಷ್ಯ ಸ್ವಭಾವದ ನೂರೆಂಟು ಹಾಸ್ಯಾಸ್ಪದ ವೈಚಿತ್ರ್ಯಗಳು ವಿಜ್ಞಾನದ ಅಳತೆಗೆ ಸಿಗದೆ ನುಣುಚಿಕೊಂಡಿವೆ. ಅಳುವುದಕ್ಕೆ ಸಾವಿರ ಕಾರಣಗಳಿದ್ದರೆ, ನಗುವುದಕ್ಕೆ ಒಂದು ಕಾರಣವಿದ್ದರೆ, ಆ ಕಾರಣವನ್ನೆ ಬಲಪಡಿಸಿಕೊಂಡು ಬದುಕನ್ನು ಸವಿಯಬೇಕೆಂಬುದೇ ಗೊರೂರರ ಆಶಯ. ಇದೇ ನಮ್ಮ ನಿಮ್ಮೆಲ್ಲರ ಆಶಯವೂ ಹೌದು.

ಗೊರೂರರ ಜೀವನ ದರ್ಶನ :

ಜೀವನ ದರ್ಶನ ಎಲ್ಲರಿಗೂ ಸಾಧ್ಯವಿಲ್ಲ. ಜೀವನವನ್ನು ದರ್ಶಿಸುವ ವ್ಯಕ್ತಿಗೆ ಮೂರು ಬಗೆಯ ವ್ಯಕ್ತಿತ್ವಗಳು ಬೇಕಾಗುತ್ತದೆ.

1. ವ್ಯಕ್ತಿ (Person)
2. ಸಾಂಸ್ಥಿಕ ವ್ಯಕ್ತಿ (Person in organisation)
3. ವೈಯಕ್ತಿಕ ವಿಶೇಷತೆ (Individual Specialisation)

ಬರಿಯ ವ್ಯಕ್ತಿ ಒಬ್ಬ ಸಾಮಾನ್ಯ ಮನುಷ್ಯ. ಅವನು ತನ್ನ ಇತರ ವ್ಯಕ್ತಿಗಳ ಜೊತೆಗೆ ಸಂವಾದ (Interact) ಮಾಡುತ್ತಾನಾದರೂ ಅದು

ಅವನ ಭೌತಿಕ ಅಪೇಕ್ಷೆಗೆ ಮಾತ್ರ ಸೀಮಿತವಾಗಿರುತ್ತದೆ. ಅವನ ಈ ವೈಯಕ್ತಿಕ ಭೌತಿಕತೆ ಏನಿದ್ದರೂ ತನ್ನ ಭೌತಿಕ ದಾರಿದ್ರ್ಯವನ್ನು ತುಂಬಿಕೊಳ್ಳುವುದಾಗಿರುತ್ತದೆ. ತನ್ನಿಂದ ವಿಸ್ತೃತವಾಗಿ ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಮತ್ತು ಈ ಅವಕಾಶಗಳು ಹೆಚ್ಚುಕಾಲ ಬಳಕೆಗೆ ಬರಲು ಈ ವ್ಯಕ್ತಿ ಒಂದು ಸಂಸ್ಥೆಯ ನಿರ್ಬಂಧಗಳಿಗೆ ಒಳಗಾಗುತ್ತಾನೆ. ಅಷ್ಟರ ಮಟ್ಟಿಗೆ ಅವನ ವ್ಯಕ್ತಿತ್ವ ಸಮೂಹ ಸಂಬಂಧಿಯಾಗಿ ವಿಕಾಸಗೊಳ್ಳಲು ತೊಡಗುತ್ತದೆ. ಒಂದು ಸಂಸ್ಥೆ ತನ್ನ ತಾತ್ವಿಕತೆಯಲ್ಲಿ ಎಷ್ಟೇ ಕುಬ್ಜವಾಗಿದ್ದರೂ ತನ್ನ ಸಮಾಜದಲ್ಲಿ ಒಂಟಿ ಎನ್ನುವ ವ್ಯಕ್ತಿಯನ್ನು ಕೆಲಮಟ್ಟಿಗಾದರೂ ವಿಸ್ತರಿಸುತ್ತದೆ. ಪ್ರಾಥಮಿಕ ಮನುಷ್ಯ ಎರಡನೆ ಹಂತವನ್ನು ತಲುಪುವ ವಿಧಾನ ಇದು. ಈ ವ್ಯಕ್ತಿ ಮತ್ತು ಸಂಸ್ಥೆಯ ಆಂತರಿಕ ಸಂಘರ್ಷದ ಮುಂದಿನ ಭಾಗವೇ, ಆ ಸಮಾಜದಲ್ಲಿ 'ಜೀವನದರ್ಶಿ' ವ್ಯಕ್ತಿತ್ವವನ್ನುಂಟು ಮಾಡುವಂಥದ್ದು.

ಗಾಂಧೀಜಿ ಹೇಗೆ ಒಳಹೊರಗೆ ಒಟ್ಟಾಗಿ ಬೆಳೆದರೋ ಹಾಗೆಯೇ ಅವರ ಅನುಯಾಯಿಗಳು ತಮ್ಮ ಒಳಹೊರ ಬದುಕನ್ನು ವೀಕ್ಷಿಸಿ ಭಾರತಕ್ಕೆ ಬೇಕಾದ ಹೊಸ ಜೀವನವನ್ನು ದರ್ಶಿಸಲು ತೊಡಗಿದರು. ಈ ಆಂತರಿಕ ವಿಮರ್ಶಾಚಿಂತನಾ ವಿಧಾನ ಭಾರತದ ಸಮಾಜ ವಿಜ್ಞಾನ ಮತ್ತು ಸಾಹಿತ್ಯ ಚಿಂತನೆಗೂ ಬೇರುಬಿಡತೊಡಗಿತ್ತು. ಆ ಕಾಲಘಟ್ಟದ ಪ್ರಜ್ಞಾವಂತ ಪ್ರತಿವ್ಯಕ್ತಿಗೂ ಮೊದಲು ಭಾರತವನ್ನು ದರ್ಶಿಸಿಕೊಂಡು ಭಾರತೀಯನಾಗುತ್ತಾ ಮುನ್ನಡೆಯಬೇಕಿತ್ತು. ಜನ ಸಂಬಂಧಿಯಾಗಿಯೇ ಜೀವನದ ಬಗ್ಗೆ ಚಿಂತಿಸುವ ಸಾಹಿತಿಗಳು ಅನಿವಾರ್ಯವೆಂಬಂತೆ ಈ ಜೀವನ ಚಿಂತನೆಗೆ ಒಳಗಾದರು. ಇಂಥವರಲ್ಲಿ ಗೊರೂರರು ಒಬ್ಬರು. ಅವರು ಹುಟ್ಟುತ್ತಾ ಬ್ರಾಹ್ಮಣರು, ಬರೆಯುತ್ತಾ ಕನ್ನಡಿಗರು, ಬದುಕುತ್ತಾ

ಭಾರತೀಯರಾದರು. ಆ ಭಾರತೀಯತ್ವವೇ ಅವರ ಜೀವನದ ದರ್ಶನದ ಮುಖ್ಯ ತಿರುಳು.

ಫಲಾಪೇಕ್ಷೆ ಇಲ್ಲದೆ ವ್ಯಕ್ತಿ ತನ್ನ ಕರ್ತವ್ಯವನ್ನು ತಾನು ನೆರವೇರಿಸಬೇಕು, ಎಂಬುದು ಭಾರತೀಯ ಸಂಸ್ಕೃತಿ ಸತ್ವ. ಈ ಹಿನ್ನೆಲೆಯಲ್ಲಿ ಗೊರೂರರು ಬೆಸ್ತರ ಕರಿಯನನ್ನು ದರ್ಶಿಸಿರುವುದು. ತನ್ನ ಕರ್ತವ್ಯದಲ್ಲಿ ಸ್ವಾಭಾವಿಕವಾಗಿ ಕ್ರಿಯಾಶೀಲನಾಗಿರುವ ಕರಿಯ ಗೊರೂರರ ದೃಷ್ಟಿಯಲ್ಲಿ ಒಬ್ಬ ಯೋಗಿ. ಇದೇ ನಿಟ್ಟಿನಲ್ಲಿ ಕಾಯಕ ತತ್ವವನ್ನು ಪ್ರತಿಪಾದಿಸುವ ಕಥೆ 'ಪೂಜೆ'. ಈ ತತ್ವಕ್ಕೆ ಬದ್ಧನಾಗಿ ತನ್ನ ಕೃಷಿಕ ಜೀವನವನ್ನು ಅಪ್ಪಿಕೊಳ್ಳುವ ಕಥಾನಾಯಕ, ವೆಂಕಟರಾಯ ವ್ಯವಸಾಯವನ್ನೇ ದೈವ ಪೂಜೆ ಎಂದು ನಂಬಿದ್ದವನು. ಸಾಂಪ್ರದಾಯಿಕ ದೇವರ ಪೂಜೆ ಮತ್ತು ಹರಿಕಥಾಶ್ರವಣಗಳಿಗಿಂತ ಕಾಯಕ ಮುಖ್ಯ. ಸರ್ಕಾರಿ ವೃತ್ತಿಗಿಂತ ಬೇಸಾಯ ಉತ್ತಮ ಎಂಬ ವಾಸ್ತವ ಸಂಗತಿಯನ್ನು ದರ್ಶಿಸಿದ್ದಾರೆ ಗೊರೂರರು. ಜೀವನದ ಸ್ವಾರಸ್ಯಗಳು ಅನುಭವವಾಗುವುದು ಆ ಜೀವನವನ್ನು ಅದರ ಪೂರ್ಣತೆಯಲ್ಲಿ ಬಾಳುವವರಿಗೆ. ಹಳ್ಳಿಯುವರು ಬಾಳಿನಿಂದ ಎಂದೂ ವಿಮುಖರಾದವರಲ್ಲ. ಇದು ಗೊರೂರರು ಕಂಡ ಗ್ರಾಮೀಣ ಬದುಕು. ಗೊರೂರರ ಬಹುಪಾಲು ಕೃತಿಗಳಲ್ಲಿ ನಗರ ಜೀವನ ಭ್ರಮೆಯಾಗಿದ್ದು ಗ್ರಾಮೀಣ ಬದುಕು ನೆಮ್ಮದಿಯ ಬದುಕಿನ ಕೇಂದ್ರವಾಗಿದೆ.

ಸಾಮಾನ್ಯ ಜನರ ಬದುಕಿನ ಬಗ್ಗೆ ಅಪಾರವಾದ ಪ್ರೇಮ ಹಾಗೂ ಸಹಾನುಭೂತಿಯನ್ನು ಹೊಂದಿದ್ದವರು ಗೊರೂರರು. ಅವರ ಮಾತುಗಳನ್ನು ಗಮನಿಸಿ "ಪ್ರೇಮವು ಜೀವನದಲ್ಲಿ ಹೆಚ್ಚು ಭಾಗ, ಮುಖ್ಯಭಾಗವೂ ಹೌದು. ಆದರೆ ಪ್ರೇಮವೇ ಪೂರ್ಣ ಜೀವನವಲ್ಲ.

ಸ್ತ್ರೀ ಪುರುಷರ ಪರಸ್ಪರ ಸಂಬಂಧದಲ್ಲಿ ಜೀವನ ನಿಷ್ಠೆಯಿದೆ. ಧರ್ಮ ಪ್ರವೃತ್ತಿ ಇದೆ. ಇದು ಗೊರೂರರು ಜೀವನವನ್ನು ದರ್ಶಿಸಿದ ರೀತಿ. ಗೊರೂರರ ದೃಷ್ಟಿಯಲ್ಲಿ ಯಾವುದಕ್ಕೂ ಅನುಪಯುಕ್ತವಾದ, ಪೂರ್ಣ ತಿರಸ್ಕಾರಕ್ಕೆ ಅರ್ಹವಾದ ವಸ್ತುವಿನಲ್ಲೂ ಕೂಡ ಭಗವಂತ ಒಂದು ಗುಣವನ್ನು ಇಟ್ಟಿರುತ್ತಾನೆ. ನನ್ನ ಸೃಷ್ಟಿ ಯಾವುದೂ ವ್ಯರ್ಥವಲ್ಲ. ಪ್ರತಿಯೊಂದಕ್ಕೂ ಉದ್ದೇಶವಿದೆ, ಉಪಯೋಗವಿದೆ ಕೆಲಸವಿದೆ. ಉದ್ಧತನಾದ ನೀನು ಇದು ಯಾಕೆ? ಎಂದು ಹೇಳಬಹುದು. ನಿನಗೆ ತಿಳಿಯುವ ಬುದ್ಧಿಯಿದ್ದರೆ, ನೋಡುವ ಕಣ್ಣು ಇದ್ದರೆ ಗೊತ್ತಾಗುತ್ತದೆ" ಎಂಬ ಸತ್ಯವನ್ನು ಶಿವರಾತ್ರಿ ಕಥೆಯ ಕುರೂಪಿ ಮಲ್ಲಮ್ಮನ ಮೂಲಕ ಮತ್ತು ಅವಳ ಸುತ್ತ ಸಂಘಟಿತವಾದ ಶಿವರಾತ್ರಿಯ ಉತ್ಸವದ ಮೂಲಕ ದರ್ಶಿಸಿದ್ದಾರೆ.

ಸ್ವತಂತ್ರ ರಾಷ್ಟ್ರ ಹಾಗೂ ಸ್ವತಂತ್ರ ಪ್ರಾಂತ್ಯ ಸಂಸ್ಕೃತಿ, ಈ ಎರಡೂ ಅನ್ಯೋನ್ಯವಾಗಿ ಹೋಗಬಹುದೆಂಬ ಅರಿವು ಗೊರೂರರಿಗಿದೆ. ಅವರ ಬರವಣಿಗೆಯಲ್ಲಿ ಇದೇ ತತ್ವ ಕಂಡುಬರುತ್ತದೆ. ಈ ಅಭಿಪ್ರಾಯಗಳನ್ನು ಸಾಧು, ಸಹ್ಯಗೊಳಿಸಲು ಹೆಣಗಾಟ, ಹಿಂಸೆ ಎಲ್ಲವನ್ನೂ ಅನುಭವಿಸುತ್ತಾರೆ ಗೊರೂರರು. ಜನರು ಜೀವನ ವಿಧಾನದ ಬದಲಾವಣೆಗೆ ಸಮಸ್ಯೆಗಳನ್ನು ತಾನು ಮೊದಲು ಹೆದರಿಸಿ ನಂತರ ಕೆಲಸ ಮಾಡಬೇಕೆಂಬ ಮನೋಭಾವ ಕಂಡುಬರುತ್ತದೆ. ಗೊರೂರರು ಹಿಂಸೆಯ ಮಧ್ಯೆ ಅಧಿಕೃತ ಬರಹಗಾರರು ಎನ್ನುವುದಕ್ಕಿಂತ ಹೆಚ್ಚಾಗಿ ಜನರ ಮಧ್ಯೆ ಇರುವ ಜನಪ್ರತಿನಿಧಿ. ಜನರು ಮೂಲತಃ ಭಾರತೀಯ ಮನಸ್ಸು ಹಾಗೂ ಸ್ವಾತಂತ್ರ್ಯದ ಮಹತ್ವವನ್ನು ಮೈಗೂಡಿಸಿಕೊಂಡು ಬದುಕಬೇಕೆಂದು ಬಯಸಿದವರು, ಗೊರೂರರು. ಈ ಕಾರಣದಿಂದ ನಗರ ಹಾಗೂ ವೃತ್ತಿಗಳು ಅವರಲ್ಲಿ ತಾತ್ಕಾಲಿಕ

ಗೊಂದಲವನ್ನು ಉಂಟುಮಾಡುತ್ತವೆ. ಇದಕ್ಕೆ ವೃತ್ತಿ ಶಿಕ್ಷಣವನ್ನು ಪ್ರತಿಪಾದಿಸುತ್ತಾರೆ.

ಆಧುನಿಕ ಕಾಲಕ್ಕೆ ಅದನ್ನು ವಿಸ್ತರಿಸುವ ಆಲೋಚನೆ ಇದ್ದರೂ ಅವರು ವೃತ್ತಿಗೂ ಜಾತಿಗೂ ಸಂಬಂಧವನ್ನು ಕಲ್ಪಿಸುವುದರಿಂದ ಇದು ಸಾಧ್ಯವಾಗಿಲ್ಲ ಎನ್ನಿಸುತ್ತದೆ. ಉದಾಹರಣೆಗೆ, ಕಮ್ಮಾರ ವೀರಭದ್ರಾಚಾರಿ ಜೋಯಿಸನಾಗಲು ಪ್ರಯತ್ನಿಸಿ ಆ ಕ್ಷೇತ್ರದಲ್ಲಿ ಸೋಲುತ್ತಾನೆ. ಅದೇ ರೀತಿ 'ಮೂಲ ಶಿಕ್ಷಣ' ಕಥೆಯ ಕ್ಷೌರಿಕ ರಾಮ ವಿದ್ಯೆ ಕಲಿಯಲು ಶಾಲೆಯ ಮೆಟ್ಟಿಲು ಹತ್ತುತ್ತಾನೆ. ಆದರೆ ವಿದ್ಯೆ ಕಲಿಯದೆ ಪೋಲಿಯಾಗುತ್ತಾನೆ ಎನ್ನತ್ತಾರೆ. ಈ ಮೇಲಿನ ಉದಾಹರಣೆಗಳಿಂದ, ಕಮ್ಮಾರ ವೀರಭದ್ರಾಚಾರಿ ಹಾಗೂ ಕ್ಷೌರಿಕ ರಾಮ ಈ ಇಬ್ಬರೂ ತಮ್ಮ ಮೂಲ ವೃತ್ತಿ (ಕಸುಬು) ಗಳಿಂದ ಮಾತ್ರ ಸಫಲತೆಯನ್ನು ಪಡೆಯಲು ಸಾಧ್ಯ ಎಂಬುದನ್ನು ಹೇಳಹೊರಟಂತಿದೆ. ಆದ್ದರಿಂದಲೇ ಈ ಇಬ್ಬರೂ ತಮ್ಮದಲ್ಲದ ಕ್ಷೇತ್ರಕ್ಕೆ ತೆರಕೊಡ ಅಪಾಯವಿದೆ ಎಂದು ಲೇಖಕರಿಗೆ ಎನಿಸಿರಬಹುದು. ಆದ್ದರಿಂದಲೇ ಆ ಇಬ್ಬರೂ ತಮ್ಮ ಮೂಲ ವೃತ್ತಿಯಲ್ಲೇ ನೆಮ್ಮದಿಯ ನೆಲೆಯನ್ನು ಕಂಡುಕೊಂಡರು, ಎಂಬುದಾಗಿ ಚಿತ್ರಿಸಿದ್ದಾರೆ ಗೊರೂರರು.

ಭಾರತೀಯ ಬದುಕಿನ ಮೌಲ್ಯಗಳ ಚೌಕಟ್ಟಿನಲ್ಲಿ ಜೀವನವನ್ನು ಕಾಣುವ ದೃಷ್ಟಿ ಗೊರೂರರದ್ದು. 'ಊರ್ವಶಿ' ಕಾದಂಬರಿಯ ಸೀತಾಲಕ್ಷ್ಮಿ ಪಾತ್ರ, 'ಮುಳ್ಳುಗಿಡ' ಕಥೆಯ ತಿರುಮಲ್ಲಮ್ಮನ ಪಾತ್ರಗಳ ಮೂಲಕ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿನ ಜೀವನ ಎಷ್ಟು ಸೂಕ್ಷ್ಮವಾಗಿದೆ ಎಂಬುದನ್ನು ಹಾಗೂ ಭಾರತೀಯ ಗೃಹಿಣಿಯ ಜೀವನದ ತಿರುಳನ್ನೂ ತಿಳಿಸಿಕೊಟ್ಟಿದ್ದಾರೆ. ಗೊರೂರರು, ತಮ್ಮ ಕೃತಿಗಳಲ್ಲಿ 'ವಿಧವಾ ವಿವಾಹ'

ಸಮಸ್ಯೆಯ ಪರಿಹಾರಕ್ಕಾಗಿ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ. ಅವರ 'ವೈಯ್ಯಾರಿ ಕಥೆ' ಯ ಲಲಿತೆಯ ಪಾತ್ರ ಇದಕ್ಕೆ ಉತ್ತಮ ಉದಾಹರಣೆ. ಗ್ರಾಮೀಣ ಸಮಾಜದ ಕಟ್ಟುಗಳು, ಉಕ್ಕಿನ ಕಟ್ಟುಗಳಲ್ಲಿ, ಅವು ಮಾನವ ಸ್ವಭಾವಕ್ಕೆ ಅನುಸಾರವಾಗಿವೆ ಎಂಬುದು ಗೊರೂರರ ಅಭಿಪ್ರಾಯ. 'ಮದುವೆಯಾಗದಿದ್ದರೆ ತಾಳಿಕಟ್ಟಿಕೊಳ್ಳಲಿ', ಅದೂ ಆಗಿದಿದ್ದರೆ ಸೀರುಡಿಕೆ ಮಾಡಿಕೊಳ್ಳಲಿ, ಅಂತೂ ಸಮಾಜವನ್ನು ಒಪ್ಪಿಸಿ ಹೆಣ್ಣು ಸುಖವಾಗಿ ಬಾಳಲಿ ಎಂಬುದೇ ಅವರ ಸಂಸ್ಕೃತಿಯ ಗುರಿ. ಈ ಸಡಿಲವಾದ ಕಟ್ಟಿನಿಂದ ಎಷ್ಟೋ ಸಂಸಾರಗಳು ಉದ್ಧಾರವಾಗಿವೆ. ಗೊರೂರರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುವುದರ ಜೊತೆಗೆ ಇವೆರಡು ಚಿತ್ರಗಳಿಂದ ಅವರ ಜೀವನ ದೃಷ್ಟಿಯ ಒಲವು ಯಾವುದರತ್ತ ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ.

ಹಳ್ಳಿಯ ಜೀವನಕ್ಕೆ ಗಾಂಧೀಜಿ ಮತ್ತು ಅವರ ತತ್ವವನ್ನು ಗೊರೂರರು ಆಹ್ವಾನಿಸುವುದು ಕೂಡ ಸ್ವರಕ್ಷಣೆಗಾಗಿ ಅಲ್ಲ; ಭಾರತವನ್ನು ಸ್ವದೇಶಿ ಸಂಸ್ಕೃತಿಗೆ ಮತ್ತೆ ಒಗ್ಗಿಸಲು. ಅದಕ್ಕಾಗಿ ಸ್ವಾತಂತ್ರ್ಯ ಹಳ್ಳಿಗೆ ಬರಬೇಕು. ಅಂದಿನ ಹಳ್ಳಿಗಳು ಇಂದಿನ ಹಳ್ಳಿಗಳಾಗಿ ಬದುಕಬೇಕು. ಅವು ವಕ್ರಗತಿಗೆ ತಿರುಗಿ ನಗರಗಳಾಗಬಾರದು ಎಂದು ಹೇಳುತ್ತಾರೆ. ಮತ್ತೆ ಮತ್ತೆ ಗ್ರಾಮೀಣ ಭಾರತಕ್ಕಾಗಿ, ಭಾರತೀಯತ್ವಕ್ಕಾಗಿ ಅವರು ತಹತಹಿಸುತ್ತಾರೆ. ಸ್ವಾತಂತ್ರ್ಯ ನಂತರ ಭಾರತ ದಿಕ್ಕುತಪ್ಪಿದೆ ಎಂದು ಕಳಕಳಿ ವ್ಯಕ್ತಪಡಿಸುತ್ತಾರೆ. ಈಗಿನ ಭಾರತದ ಕೊರತೆಗೆ ಗಾಢವಾಗಿ ತೊಡಗಿಸಿಕೊಳ್ಳಲು ಕಷ್ಟವಾಗುತ್ತದೆ ಎನ್ನುತ್ತಾರೆ. ಇದು ಒಬ್ಬ ಭಾರತೀಯ ಜಾನಪದ ಚಿಂತಕನ ಧೋರಣೆಯಲ್ಲದೆ ಮತ್ತೇನು?

ಕಳೆದುಹೋಗುತ್ತಿರುವ ಸಾಮಾಜಿಕ ಜವಾಬ್ದಾರಿ ಅವರನ್ನು ಮತ್ತೂ

ದಿಕ್ಕಗೆಡಿಸಿದೆ. ಅದು ನಿಜವಾದ ಒಬ್ಬ ಜಾನಪದ ಚಿಂತಕನ ಕಳಕಳಿಯೂ ಆಗಿದೆ. ಜನಪದದ ನಂತರ ವ್ಯಕ್ತಿ, ಮನೆಗಿಂತ ದೇಶ ಮುಖ್ಯ. ದೇಶವೆಂದರೆ ಎಲ್ಲರೂ ಅದನ್ನು ಹಂಚಿಕೊಳ್ಳುವುದಲ್ಲ, ಅದಕ್ಕಾಗಿ ಎಲ್ಲರೂ ಕಷ್ಟಪಟ್ಟು ದುಡಿಯುವುದು ಎನ್ನುತ್ತಾರೆ. ಜನ-ಜಾನಪದ ಉಳಿದರೆ ದೇಶ ಉಳಿಯುತ್ತದೆ. ದೇಶ ಉಳಿದರೆ ಜನ ಉಳಿಯುತ್ತಾರೆ, ಎಂಬ ತತ್ವವನ್ನು ಅವರು ನಮ್ಮ ಗಮನಕ್ಕೆ ತರುತ್ತಾರೆ. ಒಂದಾಗುವುದೇ ಜನಪದದ ಗುರಿ. ಒಡೆದುಹೋಗುವುದೇ ವ್ಯಕ್ತಿ ಅಥವಾ ನವ ನಾಗರೀಕತೆಯ ಗುಣ" – ಎಂಬುದನ್ನು ಗೊರೂರರು ತಿಳಿಸಿ ಹೇಳುತ್ತಾರೆ.

ಗಾಂಧೀಜಿಯವರ ತತ್ವಗಳಿಂದ ಪ್ರಭಾವಿತರಾದ ಗೊರೂರರು ಅಸ್ಪೃಶ್ಯತೆಯನ್ನು ತೊಡೆದುಹಾಕುವ ದಿಕ್ಕಿನಲ್ಲಿ ಪ್ರಾಮಾಣಿಕವಾಗಿ ದುಡಿದಿದ್ದಾರೆ. ತಲೆತಲಾಂತರದಿಂದ ಈ ಸಮಸ್ಯೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುತ್ತಿರುವ ವ್ಯಕ್ತಿಗಳ ಬಗ್ಗೆ ಹಾಗೂ ಆ ವ್ಯವಸ್ಥೆಯ ಬಗ್ಗೆ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಅಸ್ಪೃಶ್ಯತೆಯ ಬಗೆಗಿನ ಒಂದು ಕುತೂಹಲಕಾರಿಯಾದ ಸಂಗತಿಯೆಂದರೆ, ಬ್ರಾಹ್ಮಣರು ಹರಿಜನರನ್ನು ಹೇಗೆ ಅಸ್ಪೃಶ್ಯರೆಂದು ಭಾವಿಸುತ್ತಾರೋ, ಅದೇ ರೀತಿ ಹರಿಜನರೂ ಬ್ರಾಹ್ಮಣರನ್ನು ಅಸ್ಪೃಶ್ಯರೆಂದೇ ಪರಿಗಣಿಸುತ್ತಾರೆ ಎಂಬುದು. ಈ ಮಾತಿಗೆ ನಿದರ್ಶನವಾಗಿ ಗೊರೂರರ 'ಬೈಲಹಳ್ಳಿ ಸರ್ವೆ' ಯಲ್ಲಿ ಮೋಜಿನಿದಾರರು ದಾರಿ ತಪ್ಪಿ ಹರಿಜನ ಕೇರಿಗೆ ಹೋದಾಗಿನ ಸಂದರ್ಭ, ಎಸ್.ಎಲ್.ಭೈರಪ್ಪನವರ 'ದಾಟು' ಕಾದಂಬರಿಯಲ್ಲಿನ ಸನ್ನಿವೇಶಗಳು. ಕಾಲಕ್ರಮೇಣ ಈ ಅಸ್ಪೃಶ್ಯತಾ ಭಾವನೆಗಳು ಮಾಯವಾಗಿ ಸಮಾನತ್ವ ಮತ್ತು ಗುಣಪಕ್ಷಪಾತ ಬೆಳೆಯಲು ಹೇಗೆ ಕಾರಣವಾಯಿತು ಎಂಬುದನ್ನು ಮೀಸೆಗುಂಡನ ಚಟುವಟಿಕೆಗಳಲ್ಲಿ ಗೊರೂರರು ತೋರಿಸಿಕೊಟ್ಟಿದ್ದಾರೆ.

ಗೊರೂರರು ಸಂಸ್ಕೃತಿ ನಿರ್ವಾಹಕನ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡವರು. ಅವರು ಗೊರೂರರನ್ನು ಕೇಂದ್ರವಾಗಿಟ್ಟುಕೊಂಡು ಬರೆಯುತ್ತಿರುವಾಗಲೇ ಗೊರೂರಿನ ಮೂಲಕ ರಾಷ್ಟ್ರಜೀವನವನ್ನು ದರ್ಶಿಸಿದವರು. ಬಹುತೇಕ ನವೋದಯ ಬರಹಗಾರರಲ್ಲಿ ಈ ಬಗೆಯ ಗುಣ ಕಾಣಿಸುತ್ತದೆಯಾದರೂ ಗೊರೂರರ ನೆಲೆ–ಬೆಲೆ ಮತ್ತು ನಿಲುವು ಬೇರೆಯವರಿಗಿಂತ ಗಟ್ಟಿಯಾದಂಥದ್ದು. ಆದ್ದರಿಂದಲೇ ಗೊರೂರರು ಬರಹಗಾರರಿಗಿಂತ ಹೆಚ್ಚಾಗಿ ನಮ್ಮ ಸಂಸ್ಕೃತಿಯ ಮಧ್ಯೆ ಹುಟ್ಟಿದ ಹೊಸ ಚೇತನವಾಗಿ ಕಾಣುತ್ತಾರೆ. ಆ ಮೂಲಕ ಭಾರತ ಗ್ರಾಮೀಣ ಬದುಕಿಗೆ ಹೊಸ ಚೇತನವನ್ನು, ಅದರ್ಶವನ್ನು ಕಟ್ಟಿಕೊಟ್ಟಿದ್ದಾರೆ. ಗೊರೂರರು ಸಾಹಿತ್ಯಕವಾಗಿ ಹೆಚ್ಚು ತೂಗುವುದಿಲ್ಲ ಎಂದು ಹೇಳುವವರೂ ಕೂಡ ಅವರ ಸಾಂಸ್ಕೃತಿಕ ಕೊಡುಗೆಯನ್ನು ಅಲ್ಲಗಳೆಯಲಾರರು. ಆದ್ದರಿಂದಲೇ ಗೊರೂರರನ್ನು ಮತ್ತೆ ಮತ್ತೆ ಜಾನಪದ ಒರೆಗಲ್ಲಿನಿಂದ ಒರೆಹಚ್ಚಿ ನೋಡುವ ಮನಸ್ಸಾಗುತ್ತದೆ.

ಸಂಪೂರ್ಣ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಗೊರೂರರು ಪ್ರಕಟಿಸಿರುವ ಕೃತಿಗಳು ಮೂರು : 1. ಹಳ್ಳಿಯ ಹಾಡುಗಳು 2. ಹಳ್ಳಿ ಬಾಳು 3. ಜನಪದ ಜೀವನ ಮತ್ತು ದರ್ಶನ. ಅವರ ಜಾನಪದ ಕೃತಿಗಳು ವಿವಿಧ ಸಾಂಸ್ಕೃತಿಕ ಮಾದರಿಗಳನ್ನು ಒಂದುಗೂಡಿಸುವುದರಲ್ಲಿ, ರಾಷ್ಟ್ರಪ್ರಜ್ಞೆಯನ್ನು ಕುದುರಿಸುವುದರಲ್ಲಿ; ಜನಾಂಗ, ಜನಾಂಗಗಳ ಪರಸ್ಪರ ತಿಳುವಳಿಕೆಗಳನ್ನು ಹೆಚ್ಚಿಸುವುದರಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗುತ್ತವೆ. ಅವರ ಜಾನಪದ ಕೃತಿಗಳು ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿಗಿರುವ ಗೌರವಯುತವಾದ ಸ್ಥಾನವನ್ನು ಪರಿಚಯ ಮಾಡಿಕೊಡುತ್ತವೆ. ಹೆಣ್ಣು,

ತಾಯಿ, ಅಕ್ಕ, ತಂಗಿ, ಅತ್ತಿಗೆ, ನಾದಿನಿ, ಹೆಂಡತಿ, ಸೂಳೆ, ವಿಧವೆ, ಬಂಜೆ ಹೀಗೆ ಬದುಕಿನ ವಿವಿಧ ಸ್ತರಗಳಲ್ಲಿ ತನ್ನ ಕಾರ್ಯ ನಿರ್ವಹಿಸಬೇಕಾಗುತ್ತದೆ ಎಂಬುದನ್ನು ಗೊರೂರರು ಉದಾಹರಣೆ ಸಹಿತ ಪರಿಚಯಿಸಿದ್ದಾರೆ.

ಗೊರೂರರಿಗೆ ಜನಪದರ ಬಗ್ಗೆ, ಜನಪದ ಸಾಹಿತ್ಯದ ಬಗ್ಗೆ ಅಪಾರ ಅಭಿಮಾನ. ಆದ್ದರಿಂದಲೇ ಅವರು ತಮ್ಮ ಸುತ್ತಿನ ಗ್ರಾಮೀಣ ಬದುಕನ್ನು ಪ್ರೇಮಾದರಗಳಿಂದ ಸ್ಫೂರ್ತಿ, ಸಹಾನುಭೂತಿಗಳಿಂದ ರಮ್ಯವಾಗಿ, ರಸವತ್ತಾಗಿ ಚಿತ್ರಿಸಿಕೊಟ್ಟಿದ್ದಾರೆ. ದುಡಿಯುವ ರೈತನ ಬಗ್ಗೆ ಅಪಾರ ವಿಶ್ವಾಸ. ಆದ್ದರಿಂದಲೇ ತಮ್ಮ 'ಹಳ್ಳಿಯ ಹಾಡುಗಳು' ಕೃತಿಯಲ್ಲಿ ಹೀಗೆ ಹೇಳಿದ್ದಾರೆ : "ನಮ್ಮ ದೇಶದ ಬೆನ್ನುಮೂಳೆಯಂತಿರುವ, ನಮ್ಮ ಕಟ್ಟಡದ ಅಡಿಗಲ್ಲಿನಂತೆ ಇರುವ ನಮ್ಮ ರೈತ ಸ್ವಾಭಾವಿಕವಾಗಿ ಸುಸಂಸ್ಕೃತನಾದವನು. ಅವನ ಹೃದಯವು ವಿಶಾಲವೂ ಕೋಮಲವೂ ಆದುದು. ಅವನಿಗೆ ಸ್ವಲ್ಪ ಸಹಾನುಭೂತಿ, ಸ್ವಲ್ಪ ಸ್ನೇಹ, ಸ್ವಲ್ಪ ಸಮಾನತೆ ಇವು ಸಿಕ್ಕಿದರೆ ಸಾಕು, ಅವನು ಇತರ ದೇಶದ ರೈತರಿಗೆ ಸಮಾನನಾಗುವುದು ಸರಿಯೆ. ಎಲ್ಲವನ್ನು ಮೆಟ್ಟಿ ನಿಲ್ಲುವ ಶಕ್ತಿ ಅವನಿಗೆ ಬರುವುದು" ಎಂದಿದ್ದಾರೆ.

ದುಡಿಮೆಗೂ ಜನಪದ ಸಾಹಿತ್ಯಕ್ಕೂ ಇರುವ ಗಾಢ ಸಂಬಂಧದ ಹಿನ್ನೆಲೆಯಲ್ಲಿ ಪರಿಶೀಲಿಸುವುದಾದರೆ, ಗೊರೂರರ ಜಾನಪದ ಕೃತಿಗಳಲ್ಲಿ ಗ್ರಾಮೀಣ ಜನರ ಸಾಧಾರಣ ನೋವು, ನಲಿವುಗಳನ್ನು ಸ್ನೇಹ-ಸಲಿಗೆಗಳನ್ನು, ಭಕ್ತಿ-ಶಕ್ತಿಗಳನ್ನು ಕುರಿತು ಹೇಳಲಾಗಿದೆಯೆ ಹೊರತು, ತಮ್ಮ ಮೈಮುರಿಯುವ ದುಡಿಮೆಯ ಕಷ್ಟದೆದುರು, ಏನನ್ನೂ ದುಡಿಯದೆ

ಬದುಕುವ ಆಳುವರ್ಗದ ಸುಖಗಳ ವ್ಯತ್ಯಾಸದ ಬಗ್ಗೆ ಇಲ್ಲದಿರುವುದು ಗಮನಾರ್ಹ ಸಂಗತಿಯಾಗಿದೆ.

ಗೊರೂರರ ಕೃತಿಗಳಲ್ಲಿ ಜನಪದರ ಬದುಕಿನ ರೀತಿಯ ಬಗ್ಗೆ ವ್ಯಕ್ತವಾಗಿರುವ ಪ್ರತಿಭಟನೆಯು ಗೌಣವಾಗುತ್ತದೆ. ಆದರೆ ಈ ಸಂಗತಿಗೆ ಹಿನ್ನೆಲೆಯಾಗಿ ಸಾಮಾಜಿಕ ವಾತಾವರಣವನ್ನು ಪರಿಶೀಲಿಸುವುದು ಹೆಚ್ಚು ಸೂಕ್ತ ಎನ್ನಿಸುತ್ತದೆ. "ಜನಪದರು ಆಲೋಚನಾ ಕ್ರಮವನ್ನು ಒದಗಿಸುವ ವಿದ್ಯೆಯಿಂದ ವಂಚಿತರಾಗಿದ್ದು ತಮ್ಮ ಕುಂದುಕೊರತೆಗಳನ್ನು ಒಟ್ಟಿಗೆ ಸೇರಿ ಚರ್ಚಿಸಿ ಆ ಮೂಲಕ ತೀರ್ಮಾನಕ್ಕೆ ಬರಲು ಸಮಯವಿಲ್ಲದ ವಾತಾವರಣದಲ್ಲಿ ಈ ಸಾಹಿತ್ಯ ಸೃಷ್ಟಿಮಾಡಿದ್ದರಿಂದ ಅನ್ಯಾಯದ ವಿರುದ್ಧ ಪ್ರತಿಭಟಿಸಿ, ಶೋಷಿತ ಸಮುದಾಯಕ್ಕೆ ನ್ಯಾಯ ದೊರಕಿಸಲಾಗಲಿಲ್ಲ."

ಸ್ವಾತಂತ್ರ್ಯ ಪೂರ್ವದ ವೇಳೆಗೇ "ಆಧುನಿಕ ಜಾನಪದ ವಿಜ್ಞಾನಿ"ಯಲ್ಲಿ ಕಂಡುಬರುವ ಹಲವು ಸಂಗತಿಗಳು ಗೊರೂರರಲ್ಲಿ ಕಂಡುಬಂದಿರುವುದು ಗಮನಾರ್ಹ ಅಂಶವಾಗಿದೆ. ಹಳ್ಳಿಯ ಹಾಡುಗಳನ್ನು ಸಂಗ್ರಹಿಸುವ ಕಾಲದಲ್ಲಿ ಅವರು ಸ್ಪಷ್ಟಪಡಿಸಿದ ಅಂಶಗಳೆಂದರೆ, ಸಂಗ್ರಹಿಸಿದ ಪ್ರದೇಶ, ಹಾಡಿರುವವರು ಪುರುಷರೋ, ಸ್ತ್ರೀಯರೋ, ಗಾಯಕರೋ, ಹಿರಿಯ ತಲೆಮಾರಿನವರೋ ಎಂಬೆಲ್ಲ ಅಂಶಗಳನ್ನು ಪ್ರಸ್ತಾಪಿಸಿರುವುದು ಅವರ ಶಾಸ್ತ್ರೀಯ ದೃಷ್ಟಿಗೆ ಉತ್ತಮ ನಿದರ್ಶನವಾಗಿದೆ. ಕ್ಷೇತ್ರ ಕಾರ್ಯಕರ್ತನಿಗೆ ಇರಬೇಕಾದ ಮೂಲಭೂತ ಗುಣಗಳನ್ನು ಕುರಿತು ಗೊರೂರರು ಹೀಗೆ ಹೇಳಿದ್ದಾರೆ:

"ಹಳ್ಳಿಯ ಹಾಡುಗಳನ್ನು ಸಂಗ್ರಹಿಸಲು ಹೊರಡುವವರಿಗೆ ಸ್ಥಳ ಪುರಾಣಗಳೂ ಕಟ್ಟು ಕಥೆಗಳೂ ರೈತರಲ್ಲಿ ಬಳಕೆಯಲ್ಲಿರುವ ಎಲ್ಲಾ

ಮಾತುಗಳೂ ಚೆನ್ನಾಗಿ ಗೊತ್ತಿರಬೇಕು." ಸಂಗ್ರಹಿತ ಸಾಹಿತ್ಯದ ಬಗ್ಗೆ ಹೇಳುತ್ತಾ : "ರೈತರ ಬಾಯಿಂದ ಪದಗಳನ್ನು ಕೇಳದಿದ್ದರೆ ಹಾಡುಗಳ ಸರಿಯಾದ ರೂಪವು ತಿಳಿಯಲು ತೊಡಕಾಗುತ್ತದೆ. ಈ ಕಾರಣದಿಂದ ನಮಗೆ ಅರ್ಥವಾಗಲಿಲ್ಲವೆಂದು ನಾವು ಹಾಡುಗಳನ್ನು, ಈ ಸಾಹಿತ್ಯ ತಿದ್ದುವುದೂ ಕೂಡ ನಮಗೆ ಅಪಾಯಕರವಾದುದು. ಆದ್ದರಿಂದ ನಾವು ಅರ್ಥವಾಗಲಿ ಆಗದಿರಲಿ ಹಾಡುಗಳನ್ನು ಅವು ದೊರೆತಂತೆಯೇ ಪ್ರಕಟಿಸಿದ್ದೇವೆ" ಎನ್ನುತ್ತಾರೆ.

ಗೊರೂರರು ಆಡಿರುವ ಈ ಮಾತುಗಳು, ಎಲ್ಲ ಕಾಲದ, ಎಲ್ಲ ದೇಶದ ಜಾನಪದ ಸಂಗ್ರಾಹಕರಿಗೂ ಅನ್ವಯಿಸುವಂಥದ್ದು. ಅಲ್ಲದೆ ಹಳ್ಳಿ ಹಾಡುಗಳು ಸಂಶೋಧಕನ ದೃಷ್ಟಿಯಿಂದ ಎಷ್ಟು ಗಣ್ಯವಾದುದು ಎಂಬುದು ಮನವರಿಕೆಯಾಗುತ್ತದೆ.

ಒಟ್ಟಿನಲ್ಲಿ ಗೊರೂರರ ಜಾನಪದ ಕೃತಿಗಳು ಹಳ್ಳಿಯ ಬದುಕಿನ ವಾಸ್ತವ ಚಿತ್ರಣಗಳನ್ನು ಕೊಡುವುದರ ಜೊತೆಗೆ ಆ ಬದುಕನ್ನು ಪೂರ್ಣವಾಗಿ ಪರಿಚಯಿಸುತ್ತವೆ. ಇಂದಿನ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಸ್ಥಿತ್ಯಂತರಗಳ ಜೊತೆಜೊತೆಯಲ್ಲಿಯೇ ಅವನ್ನು ಮೆಟ್ಟಿ ನಿಲ್ಲುವ ಗ್ರಾಮೀಣ ಜನರ ಉದಾರತನ, ವಿಶಾಲ ಮನೋಭಾವವನ್ನು ತೆರೆದುತೋರಿಸಿದ್ದಾರೆ.

ಜನಪದ ಸಾಹಿತ್ಯ ಸಂಬಂಧಿಯಾದ ಕೃತಿಗಳ ಸಂಖ್ಯೆಯಿಂದ ಗೊರೂರರ ಜಾನಪದ ಸಾಧನೆ ಮತ್ತು ಸಿದ್ಧಿಯನ್ನು ತಿಳಿಯಲಾಗುವುದಿಲ್ಲ. ಅವು ಏನಿದ್ದರೂ ಒಂದು ಕಾಲಘಟ್ಟದ, ಒಂದು ಮಾದರಿಯ ಸಾಮಗ್ರಿಯನ್ನು ಕೆಲವು ಜನಪದ ಸಂಪ್ರದಾಯದ ವಿವರಗಳನ್ನು

ಒಳಗೊಂಡವು. ಗೊರೂರರ ಜಾನಪದ ಸಂಪತ್ತು ಇರುವುದು ಅವರು ಕಂಡುಕೊಂಡಿರುವ ಮತ್ತು ಕಂಡರಿಸಿರುವ ಜೀವನ ವಿಧಾನದಲ್ಲಿ.

ಇದು ಎರಡು ರೀತಿಯಿಂದ ಸಿದ್ಧಿಸಿದ್ದು :

(1) ಭಾರತೀಯ ಸಂಪ್ರದಾಯಬದ್ಧ ಸಮಾಜದ ಜೀವನ, ಪರಂಪರೆಯಿಂದ ಅವರಿಗೆ ಜನ್ಮದತ್ತವಾಗಿ ಬಂದಿದೆ.

(2) ನಮ್ಮ ಜೀವನ ವಿಧಾನವನ್ನು ಅನ್ಯ ಸಂಸ್ಕೃತಿಗಳ ಅದರಲ್ಲೂ ಪಾಶ್ಚಾತ್ಯ ಸಂಸ್ಕೃತಿಯ ಜೊತೆಗೆ ಹೋಲಿಸಿ ನೋಡುವುದರಿಂದ ಅವರಿಗೆ ಜಾನಪದ ಜ್ಞಾನದ ಆಳ, ಅಗಲ ಮತ್ತು ಅದರ ಅನಿವಾರ್ಯತೆ ಅರ್ಥವಾಗಿದೆ.

ಗೊರೂರರು ಒಬ್ಬ ಜಾನಪದೀಯನಾಗಿರುವುದರಿಂದಲೇ ಜೀವನ ಮೌಲ್ಯಗಳನ್ನು ಹೊರಗಿನಿಂದ ಕಡ ತರುವುದಿಲ್ಲ. ತಮ್ಮ ಸಮಾಜದಲ್ಲೇ ಇರುವಂಥ ಹಳೆಯ ಮೌಲ್ಯಗಳಿಗೆ ಹೊಸ ಅರ್ಥವನ್ನು ಕೊಟ್ಟು, ಹೊಸ ಸಂದರ್ಭಕ್ಕೆ ಸೂಕ್ತವಾಗುವ ಹಾಗೆ ಮಾಡುತ್ತಾರೆ.

ಗೊರೂರರ ಇಡೀ ಸಾಹಿತ್ಯ ಜೀವನ, ಬದುಕು, ಜಾನಪದ ಜೀವನ ಮತ್ತು ಜಾನಪದವನ್ನು ಪುನರ್ ಸೃಷ್ಟಿಸಿ ಕೊಡುವ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ.

* * *

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸಾಮಾನ್ಯ ಓದುಗರು ಹಾಗೂ ವಿದ್ವಾಂಸರ ಪ್ರೀತಿಗೆ ಪಾತ್ರರಾಗಿದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸ್ವತಃ ಜಾನಪದಕ್ಕೆ ಸಾಕ್ಷಿಯಾಗಿದ್ದರು. ಅವರ ನಡೆನುಡಿ, ವೇಷಭೂಷಣ, ಬರಹದಲ್ಲಿ ಜನಪದ ಅಂಶಗಳು ಹಾಸುಹೊಕ್ಕಾಗಿದ್ದವು. ಹಾಸನ ಜಿಲ್ಲೆಯ ಪರಿಸರದಲ್ಲಿ ರೂಢಿಯಲ್ಲಿದ್ದ ಜನಪ್ರಿಯ ಜನಪದ ಗೀತೆಗಳನ್ನು ಸಂಗ್ರಹಿಸಿ, ಜನಪದವನ್ನು ಕುರಿತು ವಿವರಣಾತ್ಮಕ ಲೇಖನಗಳನ್ನು ಬರೆದು ಪ್ರಕಟಿಸಿದ್ದು ಜಾನಪದ ಕ್ಷೇತ್ರಕ್ಕೆ ಅವರು ನೀಡಿದ ಮಹತ್ವದ ಕೊಡುಗೆಯಾಗಿದೆ. ಕನ್ನಡದ ಹಿರಿಯ ತಲೆಮಾರಿನ ಜಾನಪದ ಚಿಂತಕರಲ್ಲಿ ಒಬ್ಬರಾದ ಗೊರೂರರು ಮಹಾತ್ಮಗಾಂಧೀಜಿಯವರ ಅನುಯಾಯಿಯೂ ದೇಶಭಕ್ತರೂ ಆಗಿದ್ದರು. ಹಾಸ್ಯಪ್ರವೃತ್ತಿ ಅವರ ಜೀವನೋತ್ಸಾಹದ ಪ್ರಧಾನಗುಣ. ಅವರ ಕಥೆ, ಕಾದಂಬರಿ, ಲಲಿತ ಪ್ರಬಂಧಗಳಲ್ಲೂ ಜನಪದ ಅಂಶಗಳು ಹೇರಳವಾಗಿವೆ.

ಬದುಕಿನಲ್ಲಿ ಉತ್ತಮವಾದುದನ್ನು ಉದಾತ್ತವಾದುದನ್ನು ವಿಶೇಷವಾಗಿ ಆಸ್ವಾದಿಸುತ್ತಿದ್ದ ರಸಿಕ ಮನೋಧರ್ಮ ಅವರದು. ಕನ್ನಡ ಸಾಹಿತ್ಯಕ್ಕೆ ಹೊಸ ಲವಲವಿಕೆಯನ್ನು ತಂದುಕೊಟ್ಟ ಗೊರೂರರ ವ್ಯಕ್ತಿ ಚಿತ್ರಕ್ಕೆ ಈ ಪುಸ್ತಕ ಮೀಸಲಾಗಿದೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು